ಕೋದೈ ಪಿರನ್ದವೂರ್, ಕೋವಿನ್ದನ್ ವಾಳುಮೂರ್। ಶೋದಿಮಣಿಮಾಡಂ ತೋನ್ನುಮೂರ್, ನೀದಿಯಾಯ್ ನಲ್ಲಪತ್ತರ್ ವಾಳುಮೂರ್ ನಾನ್ಮರೈಹಳ್। ಓದುಮೂರ್, ವಿಲ್ಲಿಪುತ್ತೂರ್ ವೇದಕ್ಕೋನೂರ್।। ಪಾದಹಂಗಳ್ ತೀರ್ಕುಂ, ಪರಮನಡಿ ಕಾಟ್ಟುಂ, ವೇದಮನೈತ್ತ್ ಕ್ಕುಂ ವಿತ್ತಾಹುಂ, ಕೋದೈ ತಮಿಳ್ ಐಯ್ಞೈನ್ದುಮೈನ್ದುಂ ಅರಿಯಾದ ಮಾನಿಡರೈ। ವೈಯ್ಯಂ ಶುಮಪ್ಪದುಂ ವಂಬು।। ತಿರುವಾಡಿಪ್ಪೂರತ್ತಿಲ್ ಶಹತ್ತುದಿತ್ತಾಳ್ ವಾಳಿಯೇ।

ತಿರುಪ್ಪಾವೈಮುಪ್ಪದುಂ ಶೆಪ್ಪಿನಾಳ್ ವಾಳಿಯೇ। ಪೆರಿಯಾಳ್ವಾರ್ ಪೆತ್ತೆಡುತ್ತ ಪೆಣ್ಪೆಳ್ಳೈ ವಾಳಿಯೇ। ಪೆರುಂಪೂದೂರ್ ಮಾಮುನಿಕ್ಕಿ ಪ್ಪಿನ್ನಾನಾಳ್ ವಾಳಿಯೇ। ಒರುನೂತ್ತು ನಾರ್‌ಪತ್ತು ಮೂನ್ನುರೈತ್ತಾಳ್ ವಾಳಿಯೇ। ಉಯಿರರಂಗರ್ಕ್ಕೇ ಕಣ್ಣಿ ಉಹಂದಳಿತ್ತಾಳ್ ವಾಳಿಯೇ। ಮರು ವಾರುಂ ತಿರುವಿಲ್ಲಿ ವಳನಾಡು ವಾಳಿಯೇ। ವಣುವುದುವೈ ನಹರ್ ಕೋದೈ ಮಲರ್ ಪದಂಗಳ್ ವಾಳಿಯೇ।।

❖ ❖ ❖

53. ಗೀತಾ ಜಯಂತಿ

ಜಯ ಜಯ ಮಾತಾ ಲೋಕವಿಜೇತಾ

ಜಯ ಜಯ ಮಾತಾ ಲೋಕವಿಜೇತಾ। ನಮಿಸುವೆ ಭಗವದ್ಗೀತಾ।। ಭವಭಯ ದೂರ ಸುಗಾಧಾ ಧರ್ಮವಿಜೇತಾ। ನಮಿಸುವೆ ಭಗವದ್ಗೀತಾ।।1।। ಅಂತರಂಗದಲಿ ನೀನಿರ್ದು। ಬೆಳಗಿಸು ಪಂಥವ ಮತಿ ಬೆರೆದು। ಸಚ್ಚಿದ್ರೂಪನ ತತ್ವವನೊರೆದು ಪೊರೆಪುದು ಕರುಣಾ ಸುಧೆಯನ್ನೆರೆದು।।2।। ವಿಷಯ ಸುಖದ ವಿಷ ಮೋಹವ ಕಳೆದು। ಸತ್ವವ ಬೆಳಗಿಸು ಜಯಮಾತಾ। ಉಸಿರೆ ಮಗಧ್ಯಾತ್ಮದ ನಿಜಸಾರವು। ನಮಿಸುವೆ ಭಗವದ್ಗೀತಾ।।3।। ಧರ್ಮದ ಮೇರೆಯ ತೋರುವ ಕರ್ಮದ। ಮರ್ಮವ ಪೇಳ್ವುದು ಜಯಮಾತಾ। ನಿರ್ಮಲ ಚಿತ್ತದಿ ಯೋಗದ ಹಾದಿಯ ನಿರ್ಮಿಸು ಭಗವದ್ಗೀತಾ।।4।। ಜನ್ಮ ಕರ್ಮ ಸಂಬಂಧವ ಕಳೆವಾ। ಯಜ್ಞವ ಪೇಳ್ವುದು ಜಯಮಾತಾ। ಚಿನ್ಮಯ ದೇವನ ಪದವನು ಕಾಣಿಸು। ನಮಿಸುವೆ ಭಗವದ್ಗೀತಾ।।5।। ಶುದ್ಧಾತ್ಮರ ನಿಜ ಕರ್ಮ ಯೋಗದಲಿ। ನಿಲ್ಲಿಸು ಮನವನು ಜಯಮಾತಾ। ಸಿದ್ಧರ ಪಂಕ್ತಿಯ ಸೇರುವ ಜಾಣ್ಮೆಯ। ಈವುದು ಭಗವದ್ಗೀತಾ।।6।। ಎಲ್ಲೆಡೆಯಲ್ಲಿ ಬೆಳಗುವ ನಿತ್ಯಾತ್ಮನ। ವಿಧವನಿರೂಪಿಸು ಜಯಮಾತಾ। ಪಾಲಿಸು ಮಾಯಾ ಬಂಧನದೆನ್ನನು। ನಮಿಸುವೆ ಭಗವದ್ಗೀತಾ।।7।। ಅಗಣಿತ ಮಹಿಮನ ಅನಂತರೂಪವ। ಅನುದಿನ ಸ್ತುತಿಸುವೆ ಜಯಮಾತಾ। ಜಗದೊಳಗಾತ್ಮನ ವಿಭೂತಿ ಯೋಗವ। ಭೋದಿಸು ಭಗವದ್ಗೀತಾ।।8।। ಅಕಳಂಕನ ತೇಜೋರೂಪವ। ನಾ ನೋಡ ಲಾಶಿಸುವೆ ಜಯಮಾತಾ। ಭಕುತಿಯಿಂದ ಬೇಡುತಲಿಹೆ ನಿನ್ನನು। ಕರುಣಿಸು ಭಗವದ್ಗೀತಾ।।9।। ಪಾರ್ಥನ ಮನದಾತಂಕವ ಬಿಡಿಸುತ। ಬ್ರಹ್ಮವ ತಿಳುಹಿದೆ ಜಯಮಾತಾ। ಅರ್ಧಿಸುತಿಹೆ ಅಚ್ಚುತ ಪದಸಂಗವ। ಸತತವು ಭಗವದ್ಗೀತಾ।।10।। ಭಾರತವಿದು ಜಯ ಭಾರತವೆನಿಸಿತು। ಸತ್ವಸಾಕ್ಷ್ಯದಲಿ ಜಯಮಾತಾ। ಭಾರತ ಪಂಚಮ ವೇದವಿದೆನ್ನುತ। ಸಾರಿತು ಭಗವದ್ಗೀತಾ ।।11।। ಪರಮ ಪುರುಷನ ಮುಖದಲಿ ಜನಿಸಿದ। ಪರಮ ಪವಿತ್ರಳು ಜಯಮಾತಾ। ಅರಿವು ಜೀವರಿಗೆ ನಿನ್ನಿಂದಲೆ ನಿಜ। ನಮಿಸುವೆ ಭಗವದ್ಗೀತಾ।।12।। ಜಯಜಯಮಂಗಳ ಮಂಗಳಗೀತಾ। ಮಂಗಳವ ನೀವಳು ಜಯಮಾತಾ। ನಿಯತ ಚಿತ್ತದಲಿಭಜಿಸುವೆನೆಂದಿಗು। ಸತ್ಯವಚನವಿದು ಹರಿಗೀತಾ।।13।। ಜಯಜಯಮಾತಾ ಲೋಕವಿಜೇತಾ। ನಮಿಸುವೆ ಭಗವದ್ಗೀತಾ। ಜಯಗೀತಾ ಹರಿಗೀತಾ। ಭಗವದ್ಗೀತಾ ನಮಿಸುವೆ ಭಗವದ್ಗೀತಾ।।14।।

ಕೇಳಯ್ಯ ಎನ್ನ ಮಾತು ಪಾರ್ಥನೆ (ಭಗವದ್ಗೀತಾಸಾರ) ರಾಗ: ರೇವತಿ

ಕೇಳಯ್ಯ ಎನ್ನ ಮಾತು ಪಾರ್ಥನೆ ಗೀತಾರ್ಥನೆ।।ಪ।। ಶ್ಲೋಕ।। ಕುರುಕ್ಷೇತ್ರದಿ ಎನ್ನವರು ಪಾಂಡವರು ಪೇಳೋ ಸಂಜಯಾ ಏನು ಮಾಡುವರು ಕೂಡಿ। ಕೇಳಯ್ಯ ಅರಸನೆ ನೋಡಿ ಪಾಂಡವರ ಸೇನಾ। ಮಾತನಾಡಿದ ನಿನ್ನ ಸುತ ದ್ರೋಣಗಿಂತು।।ಪ।। ಕೇಳಿ ತಾ ಪಾರ್ಥನು ಕುರು ದಂಡ। ರಣದಲಿ ಚಂಡ। ಗಾಂಡೀವ ಕರದಂಡ।। ಅಚ್ಯುತ ಪಿಡಿರಥ ನಡೆ ಮುಂದ। ಬಹುತ್ವರದಿಂದ। ನೋಡುವೆ ನೇತ್ರದಿಂದ।। ಗುರುಹಿರಿಯರ ಕೂಡ ಯಾಕೆಂದ। ಯುದ್ಧ ಸಾಕೆಂದು। ಭಿಕ್ಷವೆ ಸುಖವೆಂದ।। ಕುಂತಿಸುತ ಈ ಮಾತು ಉಚಿತಲ್ಲ। ನಿನಗಿದು ಸಲ್ಲ। ಪಿಡಿ ಗಾಂಡೀವ ಬಿಲ್ಲ।।1।। ಬಾಲ್ಯಯೌವನ ಮುಪ್ಪುತನ ದೇಹದಲ್ಲಿ ಇಂಥ ದೇಹಕೆ ಮೋಹ ಮತ್ಯಾಕಿಲ್ಲಿ। ಕಾಯ್ದು ಕೊಲ್ಲುವ ನಾನು ಇರುತಿರಲು ಇಲ್ಲಿ। ಬಿಲ್ಲು ಪಿಡಿದು

ಕೀರ್ತಿಪಡೆ ಲೋಕದಲ್ಲಿ।।ಶ್ಲೋಕ।। ಶಸ್ತ್ರದಂಜಿಕೆಯಿಲ್ಲ ಜೀವಕ್ಕೆ। ಈ ದೇಹಕ್ಕೆ ಪಾವಕನ ದಾಹಕ್ಕೆ। ಉದಕಗಳಿಂದ ವೇದನೆಯಾಕೆ ಜೀವಕ್ಕೆ। ಮಾರುತನ ಶೋಷಕ್ಕೆ ನಿತ್ಯ ಅಭೇದ್ಯ ತಾ ಜೀವನ ಸನಾತನ। ವಸ್ತ್ರದ್ಹಾಂಗೆ ಈ ತನುವು। ಆದಾವು ಹೋದಾವು ನಿನಗಯ್ಯ ನನಗಿಲ್ಲಯ್ಯಾ। ಅದನಾ ಬಲ್ಲೆನಯ್ಯಾ।।2।। ಶ್ಲೋಕ।। ಜ್ಞಾನ ದೊಡ್ಡದು ಕರ್ಮಬಂಧನವಬಿಟ್ಟು ಕರ್ಮ ಬಿಟ್ಟರೆ ಪ್ರತ್ಯವಾಯವದೆಷ್ಟು। ಫಲ ಬಿಟ್ಟು ನೀ ಮಾಡು ಸತ್ಕರ್ಮಗಳ ಸಮ ದೇಹಕೆಫಲಕರ್ಮ ಕಾರಣವಲ್ಲ।।ಪ।। ಕರ್ಮದಲ್ಲಿ ನಿನಗಧಿಕಾರ ಫಲ ತಾ ದೂರ। ಧನಂಜಯಗೋಸ್ಕರ। ಜ್ಞಾನ ದೊಡ್ಡದು ಕರ್ಮ ದೂರಯ್ಯ ಇತ್ತ ಬಾರಯ್ಯ। ಯೋಗ ಬುದ್ಧಿ ಮಾಡಯ್ಯ। ಜಿತ ಬುದ್ಧಿ ಯಾವುದೈ ಕೇಶವ ಜಗತ್ಪಾಶವ। ನೋಡದೇ ಪರಮೇಶ। ಗೋವಿಂದನಲಿ ಮನವಿಟ್ಟವ ಕಾಮ ಬಿಟ್ಟವ ಜಿತ ದೇಹ ತಾನಾದಾ।।3।। ಶ್ಲೋಕ।। ಜ್ಞಾನದೊಡ್ಡದು ಕರ್ಮದಲ್ಲ್ಯಾಕೆ ಎನ್ನ। ಬುದ್ಧಿ ಮೋಹಿಸಿ ಕೃಷ್ಣ ಕೇಳಯ್ಯ ಬಿನ್ನಪ। ಕರ್ಮವಿಲ್ಲದೆ ಮೋಕ್ಷವುಂಟೆ ಇನ್ನು ಕರ್ಮಮೋಕ್ಷದ ಬುದ್ದಿಗೆ ಬೀಜವಲ್ಲೆ।। ಯುದ್ಧ ಕರ್ಮವ ಮಾಡೋ ಪಾಂಡವ ರಣ ತಾಂಡವ। ವೈರಿ ಷಂಢನೆಂಬುವ। ಜನರೆಲ್ಲ ಮಾಳ್ಪರೋ ನಿನ್ನ ನೋಡಿ ಮತ್ತೆನ್ನ ನೋಡಿ। ನೋಡಿದರ ನೀ ಬೇಡಿ। ಎನಗ್ಯಾಕೆ ಪೇಳಯ್ಯ ಜನಕರ್ಮ ಕ್ಷತ್ರಿಯ ಧರ್ಮ। ನಷ್ಟವಾಗುವುದು ಧರ್ಮ। ಅರ್ಪಿಸು ಎನ್ನಲ್ಲಿ ಸರ್ವವು ಬಿಟ್ಟುಗರ್ವವು। ತಿಳಿ ಎನ್ನೊಳು ಸರ್ವವು।।4।। ಶ್ಲೋಕ।। ಯೋಗ ಸನ್ಯಾಸ ಎರಡು ಮುಕ್ತಿಗೆ ದೃಢವು ಭೋಗವರ್ಜಿತ ಕೇಳು ಸನ್ಯಾಸಿಯಿರವು। ಹೇಗೆ ಪದ್ಮಕೆ ವಾರಿಯ ಲೇಪವಿಲ್ಲ ಹಾಗೆ ಭಕ್ತಿಗೆ ಸಂಸ್ಕೃತಿಯು ಇಲ್ಲ।। ಅಜನಲ್ಲಿ ದ್ವಿಜನಲ್ಲಿ ಗಜನಲ್ಲಿ ಸಮನಾನಲ್ಲಿ। ಭಜಿಪರ ಮನದಲ್ಲಿ ಮನಸು ಯಾರ ಜೀವಕೆ ಬಂದು ಇತ್ತ ಬಾರೆಂದು। ಮತ್ತೆವೈರಿ ದಾರೆಂದು। ಲೋಷ್ಟಕಾಂಚನ ನೋಡು ಸಮಮಾಡಿ ಆಸನ ಹೂಡಿ। ನಾಸಿಕ ತುದಿ ನೋಡಿ। ಧ್ಯಾನಮಾಡು ಹರಿ ಅಲ್ಲಿಹ ಅವನಲ್ಲಿಹ। ಯೋಗ ಸನ್ನಿಹಿತನವನೇ।।5।। ಶ್ಲೋಕ।। ಯಾರ ಭಕ್ತಿಯು ಎನ್ನ ಪಾದಾಬ್ಜದಲ್ಲಿ ಘೋರ ಸಂಸಾರ ಯಾತನೆ ಅವರಿಗೆಲ್ಲಿ। ಶರೀರವೇ ಕ್ಷೇತ್ರವೆಂತೆಂದು ತಿಳಿಯೋ ಮರೆಯದೆ ಕ್ಷೇತ್ರಜ್ಞನೆಂದೆನ್ನ ತಿಳಿಯೋ।।ಪ।। ಶರೀರದೊಳಗಿದ್ದು ಪಾಪಿಲ್ಲ ದುಃಖಿಲೇಪಿಲ್ಲ। ಆಕಾಶವು ಎಲ್ಲಾ। ಯಾತರಿಂದ್ಹುಟ್ಟಿತು ಈ ಗುಣ ಮೂರು ಸದ್ಗುಣ। ಕೇಳ್ಕೈಯ್ಯ ಫಲ್ಗುಣ। ಸುಖದುಃಖ ಸಮಮಾಡಿ ನೋಡು ನೀ। ಈಡ್ಯಾಡು ನೀ। ಬ್ರಹ್ಮನ ನೋಡು ನೀ। ಸೂರ್ಯಚಂದ್ರರ ತೇಜ ನನದಯ್ಯ ಗುಡಾಕೇಶಯ್ಯ। ಅನ್ನಪಚನ ನನ್ನದಯ್ಯ।।6।। ಶ್ಲೋಕ।। ನಾನೇ ಉತ್ತಮ ಮನಸು ಎನ್ನಲ್ಲಿ ಮಾಡೋ ಜ್ಞಾನ ಅಜ್ಞಾನ ಪೇಳುವೆ ತಿಳಿದು ನೋಡೋ। ಜ್ಞಾನ ದುರ್ಲಭ ಅವರ ಭಕ್ತಿಗಳಂತೆ ನಾನು ಕೊಡುವೆನು ಫಲವ ಮನಸು ಬಂದಂತೆ।।ಪ।। ಸ್ಮರಣೆ ಮಾಡುತ ದೇಹ ಬಿಡುವರೋ ನನ್ನ ಪಡೆವರೋ। ಬಲು ಭಕ್ತಿ ಮಾಡುವರೋ। ಅನಂತ ಚೇತನ ಸುಳಿವೆನು ಹರಿ ಸುಲಭನು। ಮತ್ತೆ ಜನನವಿಲ್ಲವಗೆ। ಎನ್ನ ಭಕ್ತರಿಗಿಲ್ಲ ನಾಶವು। ಸ್ವರ್ಗದಾಶವು। ಬಿಟ್ಟು ಚರಣ ಭಕುತಿಯ।।7।। ಶ್ಲೋಕ।। ಕೃಷ್ಣ ತೋರಿಸು ನಿನ್ನ ವಿಭೂತಿ ರೂಪ। ಇಷ್ಟ ಪೂರ್ತಿಯ ಆಗಲೊ ಎನಗೆ ಶ್ರೀಷ। ರಾಮನಾನಯ್ಯ ತಾರಕ ಮಂಡಲದಲಿ।। ಅಕ್ಷರದೊಳಗೆ ಅಕಾರನು ಗುಣಸಾರನು। ಪಕ್ಷಿಗಳಲಿ ನಾನು ಗರುಡನು। ಸಕಲ ಜಾತಿಗಳಲ್ಲಿ ಶ್ರೇಷ್ಠತನದಲಿ। ಎನ್ನ ರೂಪ ತಿಳಿಯಲ್ಲಿ। ತೋರಿಸೋ ಶ್ರೀಕೃಷ್ಣ ನಿನ್ನ ರೂಪ ನಾನಾ ರೂಪ। ಅರ್ಜುನ ನೋಡೋ ರೂಪ। ಕಂಡನು ತನ್ನನ್ನು ಸಹಿತದಿ ಹರಿ ದೇಹದಿ। ಬ್ರಹ್ಮಾಂಡಗಳಲ್ಲಿ।।8।। ಶ್ಲೋಕ।। ಕ್ಷರ ಅಕ್ಷರ ಎರಡಕ್ಕೂ ಉತ್ತಮನು ನಾನು। ಘೋರ ನರಕದ ಲೋಭ ಕಾಮನು ನಾನು। ಸಾರದಾನವು ಸಜ್ಜನರ ಹಸ್ತದಲ್ಲಿ ಭೂರಿ ದಕ್ಷಿಣೆ ನೀಡೋ ಸತ್ಪಾತ್ರದಲ್ಲಿ।।ಪ।। ಸರ್ವ ದಾನದಕಿಂತ ಎನಭಕ್ತಿ ಕೇಳೋ ಭೂಶಕ್ತಿ। ಮಾಡಯ್ಯ ವಿರಕ್ತಿ। ಕೃಷ್ಣ ಹರಣವಾಯ್ತು ನಿನ್ನಿಂದ ಮೋಹ ಎನ್ನಿಂದ। ಬಹು ಸುವಾಕ್ಯದಿಂದ। ಕೃಷ್ಣ ಬೀಮಾನುಜರ ಸಂವಾದ ಮಹ ಸುಖಪ್ರದ। ಧೃತರಾಷ್ಟ್ರ ಕೇಳಿದ। ಬಲ್ಲೆನು ವ್ಯಾಸರ ದಯದಿಂದ ಮನಸಿನಿಂದ। ಕೃಷ್ಣನಲ್ಲೇ ಜಯವೆಂದ।।9।।

ಓಂ ಪಾರ್ಥಾಯ ಪ್ರತಿಬೋಧಿತಾಂ ಭಗವತಾನಾರಾಯಣೇನ (ಗೀತಾಜಯಂತಿ)

ಓಂ ಪಾರ್ಥಾಯ ಪ್ರತಿಬೋಧಿತಾಂ ಭಗವತಾನಾರಾಯಣೇನ ಸ್ವಯಂ। ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇ ಮಹಾಭಾರತಮ್। ಅದ್ವೈ ತಾಮೃತ ವರ್ಷಿಣೀಂ ಭಗವತೀಂ ಅಷ್ಟಾದಾಶಾಧ್ಯಾಯಿನೀಮ್।। ಅಂಬತ್ವಾಂ ಅನುಸಂಧಧಾಮಿ ಭಗವದ್ಗೀತೆ ಭವದ್ವೇಷಿಣೀ

ಗೀತಾಯಾಃ ಪುಸ್ತಕಂ ಯತ್ರ (ಗೀತಾಪ್ರಶಂಸೆ)
ಗೀತಾಯಾಃ ಪುಸ್ತಕಂ ಯತ್ರ ಯತ್ರ ಪಾಠಃ ಪ್ರವರ್ತತೇ। ತತ್ರ ಸರ್ವಾಣಿ ತೀರ್ಥಾನಿ ಪ್ರಯಾಗಾದೀನಿ ತತ್ರ ವೈಃ।।

ಸರ್ವೇದೇವಾಶ್ಚ ಋಷಯೋಃ (ಗೀತೆಯ ವಿಶೇಷತೆ)
ಸರ್ವೇದೇವಾಶ್ಚ ಋಷಯೋಃ ಯೋಗಿನಃ ಪನ್ನಗಾಶ್ಚ ಯೇ। ಗೋಪಾಲ ಗೋಪಿಕಾ ವಾಪಿ ನಾರದೋದ್ದವ ಪಾರ್ಷದೈಃ।। ಸಹಾಯೋಜಾಯತೇ ಶೀಘ್ರಂ ಯತ್ರಗೀತಾ ಪ್ರವರ್ತತೇ।।

ಸರ್ವೋಪನಿಷದೋ ಗಾವೋ (ಗೀತಾಮೃತ)
ಸರ್ವೋಪನಿಷದೋ ಗಾವೋ ದುಗ್ಧಾ ಗೋಪಾಲನಂದನಃ। ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್।।

ಚಿದಾನಂದೇನ ಕೃಷ್ಣೇನ ಪ್ರೋಕ್ತಾ (ಗೀತೆಯ ಸಾರ)
ಚಿದಾನಂದೇನ ಕೃಷ್ಣೇನ ಪ್ರೋಕ್ತಾ ಸ್ವಮುಖತೋರ್ಜುನಮ್। ವೇದತ್ರಯೀ ಪರಾನಂದಾ ತತ್ವಾರ್ಥ ಜ್ಞಾನಸಂಯುತಾ।।

ಭಗವದ್ಗೀತೆ ಪಾವನ ಚರಿತೆ (ಸಂದೇಶ)

ಭಗವದ್ಗೀತೆ ಪಾವನ ಚರಿತೆ ಮನುಕುಲಕೆ ಇದು ಆದರ್ಶಗೀತೆ।।ಪ।। ಪಾರ್ಥಸಾರಥಿಯು ಬೋಧಿಸಿದ ಗೀತೆ। ಜೀವನಧರ್ಮವ ಅರುಹಿದ ಗೀತೆ। ಪಾರ್ಥನ ಮೋಹವ ಬಿಡಿಸಿದ ಗೀತೆ। ಕರ್ತವ್ಯ ಪ್ರಜ್ಞೆಯ ಮೂಡಿಸಿದ ಗೀತೆ।।1।। ಜ್ಞಾನಮಾರ್ಗವನು ತೋರಿದ ಗೀತೆ। ಅಜ್ಞಾನ ತಮವನು ಸರಿಸಿದ ಗೀತೆ। ಭಕ್ತಿಯ ಶ್ರೇಷ್ಠತೆ ತಿಳಿಸಿದ ಗೀತೆ। ವಿಶ್ವರೂಪವನು ತೋರಿದ ಗೀತೆ।।2।। ಎಲ್ಲ ಧರ್ಮಗಳ ಸಾರವು ಗೀತೆ। ಅಂತರಂಗವನು ಬೆಳಗುವ ಗೀತೆ। ಮುಕ್ತಿಮಾರ್ಗ ವನು ತೋರುವ ಗೀತೆ। ಚೈತನ್ಯದಾಸನ ಮನಸಂಪ್ರೀತೆ।।3।।

ಓಂ ಜೈ ಭಗವದ್ಗೀತೆ ಸ್ವಾಮಿನಿ (ಹಿಂದಿ) ರಾಗ: ಕುರಂಜಿ

ಓಂ ಜೈ ಭಗವದ್ಗೀತೆ ಸ್ವಾಮಿನಿ ಜೈ ಭಗವದ್ಗೀತೆ। ಹರಿಪ್ರಿಯ ಕಮಲವಿಹಾರಿಣಿ (2 ಸಾರಿ) ಸುಂದರ ಸುಪುನೀತೆ।।ಪ।। ಕರ್ಮಸುಮರ್ಮ ಪ್ರಕಾಶಿನಿ ಕಾಮಾಸಕ್ತಿ ಹರಾ। ದೇವಿ ಕಾಮಾಸಕ್ತಿ ಹರಾ। ತತ್ತ್ವಜ್ಞಾನವಿಕಾಸಿನಿ ತತ್ತ್ವ ಜ್ಞಾನವಿಕಾಸಿನಿ ವಿದ್ಯಾಬ್ರಹ್ಮ ಪರ।।ಅ.ಪ।। ನಿಶ್ಚಲ ಭಕ್ತಿವಿದಾಯಿನಿ ನಿರ್ಮಲ ಮಲಹಾರಿ। ದೇವಿ ನಿರ್ಮಲ ಮಲಹಾರಿ। ಶರಣರಹಸ್ಯ ಪ್ರದಾಯಿನಿ ಸದ್ವಿಧಿ ಸುಖಕಾರಿ।।1।। ರಾಗದ್ವೇಷ ವಿದಾರಿಣಿ ಕಾರಿಣಿ। ಮೋದಸದಾ ದೇವಿ। ಕಾರಿಣಿ ಮೋದಸದಾ। ಭವಭಯಹಾರಿಣಿ। ತಾರಿಣಿ ಪರಮಾನಂದಪ್ರದ।।2।। ಅಸುರ ಭಾವವಿನಾಶಿನಿ ನಾಶಿನಿ। ತಮರಜನೀ ದೇವಿ। ನಾಶಿನಿ ತಮರಜನೀ ದೇವಿ। ಸದ್ಗುಣದಾಯಿನಿ। ಹರಿರಸಿಕಾ ಸಜನೀ।।3।। ಸಮತಾತ್ಯಾಗ ಸಿಖಾವನಿ। ಹರಿಮುಖಿಕೀ ವಾಣೀ। ದೇವಿ ಹರಿಮುಖಿಕೀ ವಾಣಿ। ಸಕಲ ಶಾಸ್ತ್ರಕೀ ಸ್ವಾಮಿನಿ। ಶ್ರುತಿಯೋಂ ಕೀ ರಾಣಿ।।4।। ದಯಾಸುಧಾಬರ್ ಸಾವನಿ। ಮಾತೃಕೃಪಾಕೀ ಜೈ ದೇವಿ। ಮಾತೃಕೃಪಾಕೀ ಜೈ। ಹರಿಪದ ಪ್ರೇಮದಾನ್ ಕರ್। ಅಪನೋ ಕರಲೀ ಜೈ।।5।। ಓಂ ಜೈ ಭಗವದ್ಗೀತಾ।।

ಜಯ ಭಗವದ್ಗೀತೆ ಮಾತೇ ರಾಗ: ಅಭೀರಿ

ಜಯ ಭಗವದ್ಗೀತೆ ಮಾತೇ। ಜಯಜಯ ಗೀತೆ ಜಯ ವ್ಯಾಸ ಜಾತೆ।।ಪ।। ಜಯ ಜಯ ಇಹಪರ ಕಲ್ಯಾಣದಾತೆ। ಶಕ್ತಿ ಶಾಲಿನಿ ಮುಕ್ತಿದಾಯಿನಿ। ಭಕ್ತಿಪ್ರಚೋದಿನಿ ಜನನೀ ಜನನೀ।।1।। ಆಶಾ ಮೋಹ ಆರ್ತ ಸಂಹಾರಿಣಿ। ದೇವಕಿ ತನಯ ಶ್ರೀಕೃಷ್ಣ ಚಿಂತಾಮಣಿ।।।।

ವಿಶ್ವವ್ಯಾಪಕ ಗ್ರಂಥವು ಗೀತೆ (ಲಾವಣಿ)

ವಿಶ್ವವ್ಯಾಪಕ ಗ್ರಂಥವು ಗೀತೆ। ಉಪನಿಷತ್ತುಗಳ ಸಾರವು ಗೀತೆ। ಭಗವಾನ್ ಕೃಷ್ಣನು ಪಾರ್ಥಗೆ ಹೇಳಿದ ಬುದ್ಧಿಯ

ಮಾತುಗಳೀಗೀತೆ।।1।। ಏಳ್ನೂರು ಶ್ಲೋಕದ ಗ್ರಂಥವು ಗೀತೆ ನೋಡಲು ತುಂಬಾ ಚಿಕ್ಕದಹುದು। ಮೂರ್ತಿ ಚಿಕ್ಕದು ಅದರೂ ಆದರ ಕೀರ್ತಿ ಮಾತ್ರ ಬಹುದೊಡ್ಡದು।।2।। ಇಹದಲಿ ಸುಖವನು ಪಡೆಯಲು ನಾವು ದಾರಿಯ ಇದರಲ್ಯಾಣುವೆವು। ಪರದಲಿ ಶಾಂತಿಯ ಹೊಂದಲು ನಾವು। ಗೀತೆಲಿ ದಾರಿಯ ಕಾಣುವೆವು।।3।। ಆಣಿ ಮುತ್ತಿನ ಭಾರತ ಸರಕೆ ರತ್ನದ ಪದಕವು ಈ ಗೀತೆ। ಜಾಣವ್ಯಾಸರು ಭಾರತ ಮಧ್ಯದಿ ಗೀತಾಪದಕವನಿಟ್ಟಿಹರು।।4।। ಈ ಪದಕದ ಮಹತ್ವ ಇಷ್ಟೆಂದು ಹೇಳಲು ಶೇಷನು ಕೂಡ ಬಳಲುವನು। ಮಂದಮತಿಯು ತಾನೇನ್ನಲು ತಿಳಿಯದೆ ತುಂಬ ನರಳುವೆನು।।5।।

ಗೀತೆಯ ಹಿನ್ನೆಲೆ

ದುಷ್ಟದುರ್ಯೋಧನ ಕರೆದನು ಧರ್ಮನ ಪಗಡೆಯಾಟಕೆ ಬಾರೆಂದೂ। ಅಷ್ಟಮ ಶನಿಯ ಕಾಟದಿಂದ ಒಪ್ಪಿದನವನು ಅದಕಂದೂ।।6।। ಸೋತರೆ ಕಾಡಲಿ ಹನ್ನೆರಡೊರ್ಷ ಇನ್ನೊಂದೋರ್ಷ ಅಜ್ಞಾತ । ಅಜ್ಞಾತದಲ್ಲಿ ಗುರ್ತಿಸಿದಲ್ಲಿ ತಿರುಗುವನವಾಸ ಅಜ್ಞಾತ।।7।। ಉಭಯತ್ರರೂ ಇದಕ್ಕೊಪ್ಪಿದರು ಆಟವು ಮೊದಲಾಯ್ತಾವಾಗ। ಅಯ್ಯೋ ಪಾಪ ಸೋತನು ಧರ್ಮಜ ಕಾಡಿಗೆ ಹೊರಟನು ಆವಾಗ।।8।। ವನವಾಸವತಾತೀರಿಸಿಕೊಂಡು ಅಜ್ಞಾತಸ್ಥಳವನ್ನು ನಿರ್ಧರಿಸಿ। ಪರಿವಾರದೊಡನೆ ಬಂದನು ಧರ್ಮನು ಸನ್ಯಾಸಿ ವೇಷವ ಸ್ವೀಕರಿಸಿ।।9।। ಹದಿಮೂರುವರ್ಷ ಹೊರಗಿದ್ದು ಬಂದನು ಧರ್ಮರಾಯನು ಹಿಂದಕ್ಕೆ। ಪುರಜನರೆಲ್ಲರೂ ಸಂತಸದಿಂದ ಬರಮಾಡಿಕೊಂಡರೂ ರಾಜ್ಯಕ್ಕೆ।।10।। ಹಿರಿಕಿರಿಯರು ಎಲ್ಲರೂ ಸೇರಿ ರಾಜ್ಯವ ಕೊಡಿಸಲು ಮನಮಾಡಿ। ಕೌರವರಾಯನ ಕಂಡರು ಅವರ ಹಿಂದಕೆ ರಾಜ್ಯವ ಕೊಡೆಂದರು।।11।। ಆಗದು ಆಗದು ಆಗದು ಎಂದು ಖಂಡಿತ ಹೇಳಿದ ಕೌರವನು ಕ್ಷತ್ರಿಯರಾದರೆ ಯುದ್ಧವ ಮಾಡಲಿ ಪಡೆಯಲಿ ಎಂದನು ಕೌರವನು।।12।। ಯುದ್ಧವು ಬೇಡಾ ಬೇಡೆಂದು ಭೀಷ್ಮದ್ರೋಣರು ಹೇಳಿದರು। ಆಗದು ಆಗದು ಆಗದು ಎಂದು ತಿರುಗೀ ಕೌರವ ಹೇಳಿದನು।।13।। ಯುದ್ಧವು ತುಂಬಾ ಹಾನಿಕರ ಸೋಲುಗೆಲುವು ಸ್ಥಿರವಲ್ಲಾ। ಯುದ್ಧಿ ಸಾಯ್ವರು ಬಹುಜನರು ರಕುತದ ಕಾಲುವೆ ಹರಿಯುವುದು।।14।। ಕ್ಷಾಮ ಡಾಮರವಾಗುವುದು ರೋಗ ರುಜಿನವು ಕಾಡುವುದು। ಯುದ್ಧವು ಬೇಡಾ ಬೇಡೆಂದು ಪುನಃ ಹೇಳಿದವರಿಬ್ಬರು।।15।। ಕೃಷ್ಣನು ಕೂಡ ಅಲ್ಲಿಗೆ ಬಂದು ಹೇಳಿದ ಬುದ್ಧಿ ಕೌರವಗೆ ದುಷ್ಟ ಕೌರವನಾದರೊ ತಾನು ಕಿವಿಯೇ ಕೊಡಲಿಲ್ಲ ಆ ಮಾತಿಗೆ।।16।। ಯುದ್ಧವು ಮಾಡಲೇ ಬೇಕಾಯಿತು ಬೇರೆದಾರಿಯಿಲ್ಲವಾಯಿತು। ಸಿದ್ಧತೆಗಾಗಿ ಎದ್ದಿದ್ದ ಪಾರ್ಥಗೆ ಅಗ್ರಜನಪ್ಪಣೆ ಬೇಕಾಯಿತು।।17।। ಕಮಲನೇತ್ರನಾ ಕಾಣಲು ಪೋಗು ಅಮಿತ ಸಹಾಯವಾಗುವುದು। ಕಮಲನಯನನ ಅಪ್ಪಣೆ ಪಡೆದರೆ ಕ್ಷೇಮವು ನಮಗೆ ಆಗುವುದು।।18।। ಕೃಷ್ಣನ ಕಾಣಲು ಹರುಷಿತನಾಗಿ ಹೊರಟನು ಪಾರ್ಥ ತಕ್ಷಣವೆ ದುಷ್ಟ ಕೌರವನಿದನು ಕೇಳಿ ತಾನೂ ಹೊರಟನು ಆಕ್ಷಣವೇ।।19।। ಮಾಯಾ ಮಾಧವ ಮೊದಲೆ ತಿಳಿದು ನಿದ್ರಿಸಿದಂತೆ ನಟಿಸಿದನು। ಜಗದೇಕ ವೀರನು ಅಲ್ಲಿಗೆ ಬಂದು ಪಾದದ ಬಳಿಯಲಿ ಕೂತಿದ್ದನು।।20।। ಪಾದದ ಬಳಿಯಲಿ ಅರಸನೆ ಕೂಡುವುದೆಂದಿಗೂ ಸರಿಯಿಲ್ಲೆಂದ್ಹೇಳಿ। ಕೌರವರಾಯನು ಬಂದವನು ಕೂತನು ಕೃಷ್ಣನ ತಲೆಯ ಬಳಿ।।21।। ನಿದ್ದೆಯಿಂದ ಎದ್ದವನಂತೆ ಕೃಷ್ಣನು ತನ್ನಯ ಮೈ ಮುರಿದು ಪಾದದ ಬಳಿಯಲಿ ಕೂತಿದ್ದ ಪಾರ್ಥನ ಕಂಡನು ತಾನು ಕಣ್ತೆರೆದು।।22।। ಪಾಂಡವರೆಲ್ಲರ ಯೋಗಕ್ಷೇಮವ ಕೇಳಿದ ಕೃಷ್ಣನು ಹರ್ಷದಲಿ। ಕಂಡನು ನಂತರ ಕೌರವನು ಬರಲೂ ಕಾರಣ ಕೇಳಿದನು।।23।। ಅರಸರು ತಾವು ಬಹುದೂರ ಬಂದಿರಿ ಕಾರಣವೇನೋ ಗೊತ್ತಿಲ್ಲ। ಕರೆಕಳಿಸಿದ್ದರೆ ಇಲ್ಲಿಗೆ ನೀವು ನಾವೇ ಅಲ್ಲಿಗೆ ಬರುತ್ತಿದ್ದೆವು।।24।। ಕೌರವ ತನ್ನಯ ಬರುವಿಕೆಗೆ ಕಾರಣ ಹೇಳಿದನಾತುರದಿ। ಇದ ಕೇಳಿದ ಶ್ರೀ ಕೃಷ್ಣನು ತನ್ನಯ ಮನವನು ತಿಳಿಸಿದ ಗಂಭೀರದಿ।।25।। ಇದನು ಕೇಳಿದ ಕೌರವರಾಯನು ಕೋರಿದ ಬಲರಾಮನ ಸೈನ್ಯವನು। ಪಾರ್ಥನ ಪ್ರಾರ್ಥನೆಗನುಗುಣವಾಗಿ ಸೇರಿದ ಕೃಷ್ಣನು ಧರ್ಮನನು।।26।। ಈರ್ವರು ಬಂದರು ಹಿಂದಕ್ಕೆ ಸೇನಾವ್ಯೂಹವ ರಚಿಸಿದನು। ದುಷ್ಟದ್ಯುಮ್ನನು ರಚಿಸಿದ ವ್ಯೂಹವ ಕಂಡನು ಕೌರವ ಕಾತುರದಿ।।27।। ಭೀಷ್ಮದ್ರೋಣ ಕರ್ಣಾದಿಗಳು ಅಶ್ವತ್ಥಾಮ ಕೃಪರುಸಹಾ ಕೌರವ ಪಕ್ಷವ ಹಿಡಿದೂ ತಾವು ಪ್ರಾಣವ ಕೊಡಲು ಅನುವಾದರು।।28।। ಏಳಕ್ಷೋಹಿಣಿ ಸೈನ್ಯವು ಸೇರಿತು ಪಾಂಡವ ಪುತ್ರನ ಕಡೆಯಲ್ಲಿ। ಹನ್ನೊಂದಾಯಿತು ಜಮಾವಣೆ ಕೌರವರಾಯನ ಕಡೆಯಲ್ಲಿ।।29।।

ಒಂದಕ್ಷೋಹಿಣಿ ಲೆಕ್ಕವ ಮಾಡಲು ರಥಗಳ ಸಮವು ಆನೆಗಳು। ಆನೆಯ ತ್ರಿಗುಣವು ಕುದುರೆಗಳೂ ರಥವೈದರ ಲಬ್ಧವು ಕಾಲಾಳುಗಳು।।30।। ಶಂಖ ಭೇರಿ ಮೃದಂಗ ಕಹಳೆ ಎಲ್ಲವೂ ಒಟ್ಟಿಗೆ ಮೊಳಗಿದವು ಪಾಂಚಜನ್ಯವು ದೇವದತ್ತವು ಪೌಂಡ್ರಕವೂ ಸಹಗುಡುಗಿದವು।।31।।

ಶ್ರೀ ಕೃಷ್ಣಾರ್ಜುನರ ಸಂವಾದ

ಎರಡೂ ಸೇನೆಯ ಮಧ್ಯದಿ ನನ್ನ ರಥವನು ನಿಲ್ಲಿಸು ಓ ಕೃಷ್ಣ। ಯುದ್ಧವ ಮಾಡಲು ಬಂದಿಹರನ್ನು ನೋಡುವೆನೆಂದನು ಧನಂಜಯ।।32।। ಸಾರಥಿ ಕೃಷ್ಣನು ಬೇಗನೆ ತಂದನು ಸೇನಾ ಮಧ್ಯಕೆ ರಥವನ್ನು। ಅರ್ಜುನನಾದರೊ ಕಣ್ಣುಗಳಾಡಿಸಿ ಕಂಡನು ಇವರುಗಳೆಲ್ಲರನೂ।।33।। ಪೂಜ್ಯ ಭೀಷ್ಮರು ಕಣ್ಣಿಗೆ ಬಿದ್ದರು ದ್ರೋಣಾಚಾರ್ಯರ ತಾ ಕಂಡು। ಮಾವ ತಮ್ಮ ಪುತ್ರ ಮಿತ್ರ ಬಂಧು ಬಳಗವ ಇವಕಂಡ।।34।। ಮೋಹಾವೇಷದಿ ಬಳಲಿದ ಪಾರ್ಥ ಯುದ್ಧವಮಾಡಲು ಹಿಂಜರಿದ। ಕೃಷ್ಣಾ ನಾನು ಯುದ್ಧವ ಮಾಡೆ ಇವರನು ಕೊಲ್ಲಲ್ಲು ಮನಸಿಲ್ಲಾ।।35।। ಪೂಜ್ಯರಾದ ಭೀಷ್ಮ ದ್ರೋಣರ ಪೀಡಿಸಲು ನನ್ನ ಮನಸಿಲ್ಲಾ। ಯುದ್ಧಕ್ಕೆ ಮನಸು ಜರಿಯುತಿದೆ ಅವಯವ ನನ್ನದು ಕುಗ್ಗುತಿದೆ।।36।। ಎನ್ನಯ ಮುಖವು ಬಾಡುತಿದೆ ಗಾಂಡೀವ ಕೈಯಿಂದ ಜಾರುತಿದೆ। ರೋಮಾಂಚನವೆನಗಾಗುತಿದೆ ಮನಸಲಿ ಚಾಂಚಲ್ಯ ತೋರುತಿದೆ।।37।। ಅಪಶಕುನಗಳು ಕಾಣುತಿವೆ ರಾಜ್ಯವು ಬೇಡ ಭೋಗವು ಬೇಡ। ಪೂಜ್ಯರ ಕೊಲ್ಲಲು ಮನಸಿಲ್ಲಾ ಪೂಜ್ಯರ ಕೊಲ್ಲಲು ಮನಸಿಲ್ಲಾ।।38।। ಪಾಪಿಷ್ಟರುಗಳ ನಾ ಕೊಂದು ಪಾಪವಗಳಿಸಲು ಮನಸಿಲ್ಲಾ। ಶಸ್ತ್ರಗಳನ್ನು ಹಿಡಿಯದ ನನ್ನನ್ನು ಅವರೇ ಕೊಂದರು ಭಯವಿಲ್ಲಾ।।39।। ಹೀಗೆಂದುಹೇಳಿ ಅರ್ಜುನನು ಬಿಲ್ಲೂಬಾಣ ಕೆಳಗಿಟ್ಟು। ಏತನ್ನಾ ಹಂತ ಮಿಚ್ಛಾಮಿ ಎಂದನು ಪುನಃ ಬಾಯ್ಬಿಟ್ಟೂ।।40।। ಅರ್ಜುನ ಹೇಳಲು ಈ ರೀತಿ ಅಚ್ಚರಿಗೊಂಡನು ಶ್ರೀಕೃಷ್ಣ। ಒಡನೆಯೆ ತಾನು ನಗುನಗುತ ಬುದ್ಧಿ ಹೇಳಿದ ಶ್ರೀಕೃಷ್ಣ।।41।। ಪಾರ್ಥ ಪಾರ್ಥ ಏನಿದು ವಿಷಯ ನೀನೇಕೆನ್ನುವೆ ಈ ರೀತಿ। ಯುದ್ಧವು ನಿನಗೆ ಹೊಸದೇನಲ್ಲ ಯುದ್ಧಗಳೆಷ್ಟೋ ಮಾಡಿರುವೆ।।42।। ವೀರಾಧಿವೀರರ ಕೊಂದಿರುವೆ ಯುದ್ಧವ ಮಾಡದೆ ಹಿಂದಿರುಗಿದರೆ। ಹೀಯಾಳಿಸುವರು ನಿನ್ನನ್ನು ಹೇಡಿ ಎಂದು ಕೂಗುವರು।।43।। ನಿನ್ನಯ ಮಾನವ ತೆಗೆಯುವರು ಮರಣಕ್ಕಿಂತ ಹೆಚ್ಚಿನದೂ। ಅವಮಾನವು ನೀ ತಿಳಿಯಯ್ಯಾ ಅವಮಾನವು ನೀ ತಿಳಿಯಯ್ಯಾ।।44।। ಸ್ವರ್ಗದ ಬಾಗಿಲು ತೆಗೆದಿರುವಾಗ ಧರ್ಮದ ಯುದ್ಧವು ಒದಗಿರುವಾಗ। ಯುದ್ಧವ ಮಾಡದೆ ಹಿಂದಿರುಗುವುದು ವೀರರಿಗೆಂದಿಗೂ ತರವಲ್ಲ।।45।। ಏಳೂ ಏಳೂ ತೆಗೆದುಕೊ ಬಿಲ್ಲು ಯುದ್ಧಕ್ಕೆ ನಿಲ್ಲುತಡಮಾಡದೆ। ಏಳೂ ಏಳೂ ತೆಗೆದುಕೊ ಬಿಲ್ಲು ಯುದ್ಧಕ್ಕೆ ನಿಲ್ಲು ತಡಮಾಡದೆ। ।।46।। ಗುರುಗಳ ಕೊಂದು ರಾಜ್ಯವ ಪಡೆವುದು ಸರಿಯೇ ಹೇಳು ಶ್ರೀ ಕೃಷ್ಣ। ಭಿಕ್ಷವ ಬೇಡಿ ಬಾಳನು ಕಳೆವುದು ಒಳ್ಳೇದೆನ್ನುವೆ ನಾ ಕೃಷ್ಣ।।47।। ಶೋಕಿಸಬಾರದ ವಸ್ತುವಿಗಾಗಿ ಶೋಕಿಸುತಿರುಹುದು ಸರಿಯಲ್ಲಾ। ಜ್ಞಾನಿಗಳಂತೆ ಮಾತನಾಡುವೆ ಜ್ಞಾನವು ಮಾತ್ರ ನಿನಗಿಲ್ಲಾ।।48।। ಸತ್ತವರಿಗೆ ಬದುಕಿರುವವರಿಗೆ ಜ್ಞಾನಿಗಳೆಂದೂ ಶೋಕಿಸರು। ಸಾವು ಹುಟ್ಟೂ ದೇಹಕ್ಕೇನೆ ಆತ್ಮನಿಗಲ್ಲಾ ತಿಳಿಯಯ್ಯಾ।।49।। ದೇಹದ ಒಳಗೆ ಇರುವ ಆತ್ಮನು ಒಂದುವಸ್ತುವಲ್ಲಾ ಆತ್ಮನ ಶಕ್ತಿಯಿಂದಲೇ ಎಲ್ಲಾ ಕರಣೇಂದ್ರಿಯಗಳು ಆಡುವುದು।।50।। ಯಂತ್ರಕ್ಕೆ ಚಲಿಸುವ ಶಕ್ತಿಯನು ವಿದ್ಯುತ್ ನೀಡುವ ಪರಿಯಲ್ಲಿ। ಕರಣೇಂದ್ರಿಯಗಳ ಚಲನಕ್ಕೇ ಆತ್ಮನೇ ಕಾರಣ ತಿಳಿದಲ್ಲಿ।।51।। ಆತ್ಮನು ಸತ್ಯನು ಆತ್ಮನು ಸಾಯನು ದೇಹವು ತಾನೇ ನಶಿಸುವುದು। ನಶಿಸುವ ದೇಹಕೆ ಶೋಕವು ಏಕೆ? ಬಿಡು ಬಿಡು ಶೋಕವ ನೀನೀಗ।।52।। ಬೆಂಕಿಯು ಸುಡದು ಆತ್ಮನನು ನೀರು ನೆನೆಯಿಸದಾತ್ಮನನು। ಗಾಳಿಯು ಒಣಗಿಸದಾತ್ಮನನು ಕತ್ತಿಯು ಕಡಿಯದು ಆತ್ಮನನು।।53।। ಭರ್ಜಿಯು ಇರಿಯದು ಆತ್ಮನನು ಆತ್ಮನು ಸತ್ಯನು ಸಾಯನು ಎಂದೆಂದಿಗೂಆತ್ಮನು ಸತ್ಯನು ಸಾಯನು ಎಂದೆಂದಿಗೂ।।54।। ಈ ಕಾಣುವ ದೇಹಕೆ ಬಾಲ್ಯ ಯೌವನ ಹೇಗುಂಟೋ। ಆತ್ಮನಿಗುಂಟು ಬೇರೆ ದೇಹ ದುಃಖಿಸಬೇಡ ದೇಹಕ್ಕೆ।।55।। ಬಾಲ್ಯವು ಹೋದರೆ ದುಃಖಿಸರು ಯೌವನ ಬಂದರೆ ಹರ್ಷಿಸರು ಬಾಲ್ಯ ಯೌವನ ವಾರ್ಧಕ್ಯ ಬಂದು ಹೋಗುವುವು ತಾವಾಗಿ।।56।। ದೇಹವು ಹೋದರು ಆತ್ಮನು ಹೋಗ ಆತ್ಮನು ಅಕ್ಷಯ ಅವಿನಾಶಿ ಇದನು ತಿಳಿದವರಾರು ತಾವೇ ದೇಹಕ್ಕಾಗಿ ಶೋಕಿಸರು।।57।। ಹಳೆಯ ಅಂಗಿ ತೆಗೆದ್ಹಾಕಿ ಬೇರೊಂದಂಗಿ ತೊಡುವಂತೆ ಜೀರ್ಣವಾದ ದೇಹವ ಬಿಸುಟು ಬೇರೇ ದೇಹವ ಪಡೆಯುವನು।।58।। ಹುಟ್ಟಿದವರಿಗೆ ಮರಣವು ನಿಜವು ಸತ್ತವರಿಗೆ

ಜನ್ಮವು ನಿಜವು। ಪರಿಹರಿಸಲಾಗದ ಹುಟ್ಟುಸಾವಿಗೆ ಜ್ಞಾನಿಗಳಿಂದೂ ಶೋಕಿಸರು।।59।। ಆತ್ಮನಿಗಿಲ್ಲಾ ಹುಟ್ಟುಸಾವೂ ಇದ್ದು ಇಲ್ಲದೆ ಇರುವವನಲ್ಲಾ। ಆತ್ಮನು ನಿತ್ಯನು ಶಾಶ್ವತನು ಎಲ್ಲವೂ ಹೋದರು ಅವನ್ಹೋಗ।।60।। ಹೇಗೆ ಕೊಲ್ಲಲಿ ಎನ್ನುವಿಯಲ್ಲಾ ಕೊಲ್ಲುವರಾರು ಸಾಯುವರಾರು ಕೊಲ್ಲುವನಿಲ್ಲ ಸಾಯುವನಿಲ್ಲ ಆತ್ಮನು ಒಬ್ಬನೆ ಶಾಶ್ವತನು।।61।। ಸಾವಿಗಾಗಿ ದುಃಖಿಸಬೇಡ ಹುಟ್ಟಿಗಾಗಿ ಹರ್ಷಿಸಬೇಡ। ಕೊಲ್ಲುವರಾರು ಸಾಯುವರಾರು ಕೊಲ್ಲುವನಿಲ್ಲ ಕಾಯುವನಿಲ್ಲ। ಧರ್ಮಯುದ್ಧವ ನೀಮಾಡಿ ಧರ್ಮವ ರಕ್ಷಿಸು ಬಿಡಬೇಡ।।62।। ಭಿಕ್ಷವ ಬೇಡಿ ಬಾಳನು ಕಳೆವುದು ಉತ್ತಮವೆನ್ನುವೆ ನೀನಂತೂ। ಕ್ಷತ್ರಿಯ ಧರ್ಮವ ಕಾಪಾಡುವುದು ಒಳ್ಳೆಯದೆನ್ನುವೆ ನಾನಂತೂ।।63।। ಕ್ಷತ್ರಿಯ ಧರ್ಮವ ಕಾಪಾಡಿಕೊಂಡು ಸತ್ತರು ಒಳ್ಳೆಯದೆನ್ನುವೆನು। ಪರಧರ್ಮವ ನಿನ್ನಾಶ್ರಯಿಸಿದರು। ಭಯವುಂಟೆಂದು ಹೇಳುವೆನು।।64।। ನೀರಲ್ಲಿರುವ ಮೀನನ್ನು ಹಾಲಲ್ಲಿಟ್ಟರೆ ಬದುಕೀತೆ ಮರ್ತ್ಯಲೋಕದಿ ಬಾಳುವ ಮನುಜನು ರವಿಲೋಕದಿ ತಾ ಬಾಳುವನೆ।।65।। ನಿನ್ನಯ ಧರ್ಮವ ಕಾಪಾಡು ಧರ್ಮಯುದ್ಧವ ನೀ ಮಾಡು। ಧರ್ಮವ ನೀನು ಕಾಪಾಡಿದರೆ ಧರ್ಮವು ನಿನ್ನನ್ನು ರಕ್ಷಿಪುದು।।66।। ಜ್ಞಾನವು ಶ್ರೇಷ್ಠವೋ ಎಂದ್ಹೇಳಿ ಕರ್ಮವ ಮಾಡು ಎನ್ನುವಿಯಾ। ಜ್ಞಾನವು ಶ್ರೇಷ್ಠವೋ ಕರ್ಮವು ಶ್ರೇಷ್ಠವೋ ದಯೆಯಿಂ ನನಗೆ ಹೇಳುವಿಯಾ।।67।। ಕ್ಷಣಮಾತ್ರವಾದರು ಸುಮ್ಮನೆ ಕೂಡಲು ಯಾರಿಗೂ ಆಗದು ಕೇಳಯ್ಯಾ। ಕಣ್ಣನು ಕಟ್ಟಿ ತುಟಿಯನು ಬಿಗಿದು ಕೈಕಾಲ್ ಕಟ್ಟಿದರೇನಾಯ್ತು।।68।। ಮನಸಲಿ ಯೋಜನೆ ಮಾಡುವುದಿಲ್ಲವೆ ಸುಮ್ಮನೆ ಕೂಡುವರಾರಯ್ಯಾ। ತನುಮನವೆರಡೂ ಸುಮ್ಮನೆಯಿರಲು ಯಾರಿಗೂ ಆಗದು ಪೇಳಯ್ಯಾ।।69।। ಕರ್ಮೇಂದ್ರಿಯಗಳ ನಿಗ್ರಹಿಸಿ ಮನಸಲಿ ವಿಷಯ ಸ್ಮರಿಸಿದರೆ। ಮಿಥ್ಯಾವಾದಿಯು ತಾನಾಗುವನು ಮೋಸಗಾರನು ಎನಿಸುವನು।।70।। ಕರ್ಮವ ಮಾಡದೆ ಸುಮ್ಮನೆ ಕೂಡಲು ಯಾರಿಗೂ ಆಗದು ತಿಳಿಯಯ್ಯಾ। ಕರ್ಮಯೋಗವ ನೀಮಾಡು ಇಂದ್ರಿಯಗಳನು ನಿಗ್ರಹಿಸು ವಿಷಯಗಳನ್ನು ತಳ್ಳಿಬಿಡು।।71।। ಕರ್ಮಬೇಡೆಂದೆನಬೇಡ ಕರ್ಮವ ಮಾಡದೆ ಇರಬೇಡ। ಕರ್ಮವ ಬಿಟ್ಟರೆ ನಾವುಗಳು ಇತರರು ಬಿಡುವರು ಅದನಾಗ।।72।। ಶ್ರೇಷ್ಠರು ಯಾವುದು ಮಾಡುವರೋ ಅನ್ಯರು ಅದನೆ ಮಾಡುವರು। ಶ್ರೇಷ್ಠರು ಕರ್ಮವ ಮಾಡುವುದು ಅನ್ಯರಿಗಾಗಿ ತಿಳಿಯಯ್ಯಾ।।73।। ನನಗಾಗ ಬೇಕಾದುದೇನೂ ಇಲ್ಲಾ ಆದರೂ ಕರ್ಮವ ಮಾಡುವೆನು। ನನ್ನಂತೆಯೇ ನೀನು ಮಾಡು ಕರ್ಮವ ಮಾತ್ರ ಬಿಡಬೇಡ।।74।। ಪರಾರ್ಥಕ್ಕಾಗಿ ಮಾಡುವ ಕರ್ಮವು ದೂಷಿತವಲ್ಲಾ ಕೇಳಯ್ಯಾ। ಸ್ವಾರ್ಥಕ್ಕಾಗಿ ಮಾಡುವ ಕರ್ಮವು ಬಂಧನಕಾರಿ ತಿಳಿಯಯ್ಯಾ।।75।। ಭೋಗೈಶ್ವರ್ಯಾಸಕ್ತರು ತಾವು ನಿಶ್ಚಯ ಸ್ವಭಾವವಿಲ್ಲದೆಲೆ। ಕರ್ಮವ ಮಾಡುತ ಫಲವನು ಉಣ್ಣುತ ಸ್ವರ್ಗಸುಖವನು ಬಯಸುವರು।।76।। ಪುಣ್ಯದ ಫಲವು ತೀರಿತೆಂದರೆ ಮರ್ತ್ಯಲೋಕವ ಸೇರುವರು। ಪುನಃ ಕರ್ಮವ ಮಾಡುತಲಿದ್ದರು ಸ್ವರ್ಗಾರೋಹಣ ಮಾಡುವರು।।77।। ಕರ್ಮಾಸಕ್ತರ ಹಳಿಯಲು ಬಾರದು ಎಂದೆಂದಿಗೂ ನೀ ತಿಳಿಯಯ್ಯಾ। ಸನಕಾದಿಗಳನು ಹಳಿಯುವರ್ಯಾರು? ಕರ್ಮಿಗಳೆಂದೂ ಹೇಳಯ್ಯಾ।।78।। ಫಲಾಪೇಕ್ಷೆಯ ನೀಬಿಟ್ಟು ಕರ್ಮವ ಮಾಡು ಒಮ್ಮನದಿ। ಬಿಡುಗಡೆ ಹೊಂದುವೆ ಬಂಧನದಿಂದ ಪಡೆಯುವೆ ಸದ್ಗತಿ ನಿಜವಾಗಿ।।79।। ಜ್ಞಾನಿಯು ಪಡೆಯುವ ಫಲವನ್ನೇ ನಿಷ್ಕಾಮ ಕರ್ಮಿಯು ಪಡೆಯುವರು। ನಿಷ್ಕಾಮ ಕರ್ಮವ ನೀ ಮಾಡು ಫಲವನು ಕೋರದೆ ಸುಮ್ಮನಿರು।।80।। ನಿಷ್ಕಾಮ ಕರ್ಮವ ಮಾಡುವ ಯೋಗಿಗೆ ಕರ್ಮದ ಲೇಪನವಿಲ್ಲವಯ್ಯಾ। ಯುದ್ಧವ ಮಾಡು ಧರ್ಮವ ರಕ್ಷಿಸು ಪಾಪದ ಲೇಪನವಿಲ್ಲವಯ್ಯಾ।।81।। ಶ್ರೇಷ್ಠರ ಮಾತನು ನೀ ಕೇಳು ಅವರಂತೆ ನೀನಡೆಯಯ್ಯಾ। ಸ್ಥಾವರ ಜಂಗಮದೊಳಗೆಲ್ಲಾ ನಾನೇ ಶ್ರೇಷ್ಠನು ತಿಳಿಯಯ್ಯಾ।।82।। ನನ್ನಲ್ಲಿ ಮನಸನ್ನು ನೀನಿಟ್ಟು ನನಗಾಗಿ ಕರ್ಮವ ನೀ ಮಾಡು। ನನ್ನಲ್ಲಿ ಭಕ್ತಿಯ ಕೋರಿದರೆ ಸುಲಭದಿ ಸೇರುವೆ ನನ್ನನ್ನು।।83।। ನನ್ನಲ್ಲಿ ಮನಸನ್ನು ಸ್ಥಿರವಾಗಿಡಲು ಶಕ್ತಿಯು ಇಲ್ಲದೆ ಇದ್ದಲ್ಲಿ। ಅಭ್ಯಾಸ ಯೋಗವ ನೀ ಮಾಡು ನನ್ನಲ್ಲಿ ಮನಸು ನಿಲ್ಲಿಸುವೆ।।84।। ಅಭ್ಯಾಸ ಮಾಡಲು ಅಸಮರ್ಥನಾದರೆ ನನಗಾಗಿ ಕರ್ಮವ ನೀ ಮಾಡು। ಇದನ್ನು ಮಾಡಲು ಆಗದಿದ್ದರೆ ಕರ್ಮದ ಫಲವನ್ನು ನನಗೆ ಬಿಡು।।85।। ನಾಲ್ವರು ಭಕ್ತಿಯ ಮಾಡುವರು ಆರ್ತಿ ಅರ್ಥಾಥಿ ಜಿಜ್ಞಾಸು ನಿಸ್ವಾರ್ಥ ಬುದ್ಧಿಲಿ ಭಕ್ತಿಯ ತೋರುವನೊಬ್ಬನೆ ಜ್ಞಾನಿ ಎನ್ನುವರು ಪ್ರಯತ್ನಮಾಡುವ ಸಾವಿರಾರು ಮಂದೀಲಿ ಯಾರೋ ಒಬ್ಬರು ತಿಳಿಯುವರು।।86।।

ಭಕ್ತಿಯೋಗ

ಭಕ್ತಿಯೇ ಮುಕ್ತಿಗೆ ಸಾಧನವೂ ಭಕ್ತಿಯೆ ಸುಲಭದ ಸಾಧನವೂ। ಭಕ್ತಿಯ ನನ್ನಲ್ಲಿಟ್ಟವನ ಯೋಗಕ್ಷೇಮವ ವಹಿಸುವೆನು।।87।। ಭಕ್ತನ ಲಕ್ಷಣ ಹೇಳುವೆ ಕೇಳು ಭಕ್ತನ ನಡೆನುಡಿ ವಿವರಿಸುವೆ। ನವವಿಧ ಭಕ್ತಿಯ ತೋರುತ್ತಲವನು ಒಮ್ಮನದಿ ನನ್ನಸೇರುವನು ।।88।। ದ್ವೇಷಾಸೂಯೆಗಳಿಲ್ಲದವ ಎಲ್ಲರ ಗೆಳೆಯನು ಆಗಿರುವ। ಎಲ್ಲರಿಗೂ ದಯೆ ತೋರುವವ ಏನೊಂದೂ ಬೇಕೆನ್ನದವ ತನ್ನದು ನನ್ನದು ಎನ್ನದವ।।89।। ಸ್ವಲ್ಪದರಿಂದಲೇ ತೃಪ್ತನವ ಸ್ವಸ್ಥ ಚಿತ್ತದಿ ಬಾಳುವವ। ಎಲ್ಲವನೂ ನನಗರ್ಪಿಸು ವವ ಅವನೇ ಮಾತ್ರ ನನ್ನ ಭಕ್ತ।।90।। ಹೆರವರ ಆಶ್ರಯ ಕೋರದವ ಸ್ವತಂತ್ರ್ಯವಾಗಿ ಬಾಳುವವ। ಯಾವುದೊಂದನ್ನೂ ಬೇಡದವ ತನುಮನ ಬುದ್ಧಿಯ ನನಗರ್ಪಿಸುವವ ಅವನೇ ಮಾತ್ರ ನನ್ನ ಭಕ್ತ ಅವನೇ ಮಾತ್ರ ನನ್ನ ಭಕ್ತ।।91।।

ಅರ್ಜುನ

ನಿನ್ನಯ ಮಾತನು ಕೇಳಿದ ನನಗೆ ಮೋಹವು ಶೋಕವು ನಾಶವಾಯ್ತು ಸ್ಮೃತಿಯು ಬಂತು ನನಗೀಗ ಸ್ಮೃತಿಯು ಬಂತು ನನಗೀಗ ವಿಶ್ವರೂಪವ ನೋಡಲು ನನಗೆ ಮನಸಾಗಿರುವುದು ಓ ದೇವಾ ವಿಶ್ವರೂಪವ ನೋಡಲು ನನಗೆ ಮನಸಾಗಿರುವುದು ಓ ದೇವಾ।।92।।

ಕೃಷ್ಣ

ನಿನ್ನ ಕಣ್ಣುಗಳು ನೋಡಲಾರದು ನನ್ನ ರೂಪದ ರಭಸವನು। ನನ್ನ ರೂಪವ ನೋಡಲು ನಿನಗೆ ದಿವ್ಯ ದೃಷ್ಟಿಯ ನೀಡುವೆನು।।93।। ಅನೇಕವಾದ ಕಣ್ಣುಗಳುಳ್ಳ ನಾನಾ ರೂಪವ ಹೊಂದಿರುವ ನಾನಾ ವಿಧವಾದನ್ನೆಯ ರೂಪವ ತೋರುವೆನೆಂದನು ಶ್ರೀ ಕೃಷ್ಣ।।94।। ಎಲ್ಲಾ ಋಷಿಗಳು ಉರಗಗಳು ನಾನಾ ಪ್ರಾಣಿಗಳಿಲ್ಲವನು ಕೃಷ್ಣನ ಉದರದಿ ಕಂಡನು ಪಾರ್ಥ ಬ್ರಹ್ಮಾದಿಗಳೆಲ್ಲರು ಗಳನೂ।।95।। ಭೀಷ್ಮ ದ್ರೋಣರು ಕರ್ಣಾದಿಗಳು ಕೌರವರೆಲ್ಲರೂ ತ್ವರೆಯಿಂದ ನುಗ್ಗುತಲಿರುವ ಶ್ರೀಪತಿಯ ಕೋರೆ ದವಡೆಯ ಮುಖದಲ್ಲಿ।।96।। ನಿನ್ನಯ ದವಡೆಗೆ ಕೆಲವರು ಸಿಕ್ಕಿ ಪುಡಿಯಾಗುತಲಿಹರೂ। ಇದನು ನೋಡಿದ ನನಗಂತೂ ದಿಕ್ಕೇ ತೋಚದು ಹೇ ದೇವಾ।।97।। ಪ್ರಸನ್ನನಾಗು ಓ ದೇವ ಮೊದಲಿನ ರೂಪವ ನೀ ತೋರು। ಶರಣು ಶರಣು ಶರಣೆಂದೂ ತಿರುಗೀ ಶರಣು ನಿನಗೆಂದ।।98।। ಶಂಖ ಚಕ್ರಗದೆಯನು ಧರಿಸಿದ ಕೃಷ್ಣನ ಕಂಡನು ಧನಂಜಯ। ತುಂಬಾ ಹರ್ಷದಿ ಕೈಯನು ಜೋಡಿಸಿ ಪಾದಕೆ ಬಿದ್ದನು ಮುದದಿಂದ।।99।। ಕ್ಷಮಿಸು ಕ್ಷಮಿಸು ಓ ದೇವಾ ಕಾಡಿಸಿ ಪೀಡಿಸಿ ಬಳಲಿಸಿದೆ। ತಿಳಿಯದೆ ಮಾಡಿದ ತಪ್ಪನು ನೀನು ಮನ್ನಿಸು ಕೃಪೆಯಿಂ ಓ ದೇವಾ।।100।। ನಿನ್ನಯ ಮಾತನು ಕೇಳುವೆನು ನಿನ್ನಂತೆ ನಾನು ನಡೆಯುವೆನು। ಕರುಣಿಸಿ ನನ್ನನು ಕಾಪಾಡು ದಾರಿಯ ತೋರು ನನಗೀಗ।।101।। ನೀಕೊಂದರೂ ಸರಿಯೇ ಬಿಟ್ಟರು ಸರಿಯೇ ಇವರಾರಿನ್ನು ಬದುಕಿರಲಾರರು। ಮೊದಲೇ ಇವರನು ನಾನು ಕೊಂದಿರುವೆ ನಿಮಿತ್ತ ಮಾತ್ರ ನೀನಾಗು।।102।। ಇದನ್ನು ಕೇಳಿದ ಅರ್ಜುನನು ಶರಣು ಶರಣು ಶರಣೆಂದನು ನಿನ್ನಯ ಮಾತನು ಕೇಳುವೆನು ಯುದ್ಧವ ನಾನು ಮಾಡುವೆನು ಯುದ್ಧವ ನಾನು ಮಾಡುವೆನು।।103।।

ಗೀತಾಭ್ಯಾಸದ ಫಲ

ಗೀತಾ ಶಾಸ್ತ್ರವನೋದುವ ಮನುಜನು ನಿರ್ಭಯನಾಗಿ ಬಾಳುವನು। ವಿಷ್ಣು ಲೋಕವ ಪಡೆದವನಾಗಿ ಶಾಶ್ವತ ಸುಖದಿಂ ಬಾಳುವನು।।104।। ಸ್ನಾನವು ಕಳೆವುದು ದೇಹದ ಕೊಳೆಯ ಗೀತೆಯು ಕಳೆವುದು ಮನಸಿನ ಮಲವ ಗೀತೆಯನೋದದೆ ಅನ್ನವನೋದಲು ಹುಟ್ಟೂ ಸಾವೂ ತಪ್ಪೀತೆ।।105।। ಶ್ರದ್ಧಾ ಭಕ್ತೀಲಿ ಗೀತೆಯನೋದಲು ಮನಸಿಗೆ ಶಾಂತಿ ದೊರಕುವುದು। ಗಳಿಸಿದ ಪಾಪವು ಕಳೆಯುವುದು ಶಾಶ್ವತ ಸುಖವೂ ದೊರಕುವುದು।।106।। ಗೀತಾಧ್ಯಯನ ಮಾಡುವ ಮನುಜಗೆ ಪಾಪದ ಲೇಪನವಿಲ್ಲಯ್ಯಾ। ನರಕದ ಭಯವು ಇಲ್ಲದೆ ಅವನು ಚಿಂತಾರಹಿತನು ಆಗುವನು।।107।। ನಿನ್ನಲ್ಲಿರುವ ಆತ್ಮನು ಯಾರೋ ಎಲ್ಲರಲಿರುವವನೇ ಎಂದೂ। ನಿನ್ನಂತೆಲ್ಲರ ಕಾಣುವುದು ಗೀತಾ ಪಠಣದ ಫಲವಯ್ಯಾ।।108।। ಕೃಷ್ಣಾರ್ಜುನರ ಸಂವಾದವನು ಭಕ್ತಿಲಿ ಕೇಳುವ ಮಾನವನು। ಬಂಧನದಿಂದ

ಬಿಡುಗಡೆ ಹೊಂದಿ ಸತ್ಯಲೋಕದಿ ಬಾಳುವನು।।109।। ಗೀತಾಭ್ಯಾಸವ ಮಾಡುವ ಮನುಜನು ಚಿತ್ತದಿ ಶಾಂತಿ ಹೊಂದುವನು। ಹುಟ್ಟೂಸಾವಿನ ಕಿರುಕುಳವನ್ನು ಪಡೆಯದೆ ಸುಖದಿಂ ಬಾಳುವನು।।110।। ಭಗವದ್ಗೀತಾ ಕಿಂಚಿದಧೀತ ಗಂಗಾ ಜಲ ಲವಕಣಿಕಾ ಪೀತಾ ಸಕೃದಪಿಯೇನ। ಮುರಾರಿ ಸಮರ್ಚ ಪ್ರಿಯತೇ ತಸ್ಯಯ ಮೇವನ ಚರ್ಚಾ।।111।।

ಆರತಿ ಬೆಳಗುವೆ ಜೈ ಜೈ ಮಾತೆ

ಆರತಿ ಬೆಳಗುವೆ ಜೈ ಜೈ ಮಾತೆ। ಶ್ರೀ ಭಗವದ್ ಗೀತೇ। ಕಾರುಣ್ಯ ನಿಧಿ ವ್ಯಾಸಮುನಿಗಳಿಂದ ಅವತರಿಸಿದೆ ಮಾತೆ।।ಪ।। ಕರ್ಮಯೋಗದ ಮರ್ಮವ ತಿಳಿಸುತ। ದುರ್ಮತಿಯನು ಕಳಿವೆ। ನಿರ್ಮಲ ಚಿತ್ತವ ಮಾಡುತ। ಮನುಜರ ಧರ್ಮದಿ ನಿಲಿಸುವಿನೀ।।1।। ಭಕ್ತಿ ಯೋಗದ ಮಹಿಮೆಯ ತಿಳಿಸುತ ಚಿತ್ತವ ನಿಲಿಸುವಿನೀ। ತತ್ವಜ್ಞಾನವ ಬೋಧಿಸಿ ಮನುಜರ ಮುಕ್ತರ ಮಾಡುವಿನೀ।।2।। ಪ್ರವೃತ್ತಿ ಲಕ್ಷಣ ಧರ್ಮವ ಬೋಧಿಸಿ ತ್ಯಾಗವ ಕಲಿಸುವಿನೀ। ನಿವೃತ್ತಿ ಲಕ್ಷಣ ಧರ್ಮವ ಬೋಧಿಸಿ ಜ್ಞಾನದಿ ನಿಲಿಸುವಿನೀ।।3।। ಅಚ್ಯುತ ಶ್ರೀಹರಿ ಮುಖಕಮಲದಿ ಹೊರಟ ಜ್ಞಾನಗಂಗೇ। ಕೊಚ್ಚುತ ಪಾಪದ ಕೊಳೆಯನು ವೇಗದಿ ಹರಿಯುವೆ ಜಗದೊಳಗೆ।।4।।

❖ ❖ ❖

54. ದತ್ತಾತ್ರೇಯ ಜಯಂತಿ

ಮಾಲಾ ಕಮಂಡಲ ಧರಂ

ಮಾಲಾ ಕಮಂಡಲ ಧರಂ ಕರ ಪದ್ಮ ಯುಗೇ। ಮಧಸ್ಥ ಪಾಣಿಯುಗಲೇ। ಡಮರು ತ್ರಿಶೂಲೇ। ಯಸ್ಯಸ್ತ ಊರ್ಧ್ವಕರಯೋಃ ಶುಭ ಶಂಕ ಚಕ್ರೇ। ವಂದೇ ತಮತ್ರಿವರದಂ ಭುಜ ಷಟ್ಟಯುಕ್ತಮ್।।

ಕಾರ್ತವೀರ್ಯಗುರಂ

ಕಾರ್ತವೀರ್ಯಗುರಂ ಶುಭ್ರಿ ಮಂತ್ರಿಸೂನಂ ಮಹೌಜಸಂ ಮಂದಾರಮೂಲನಿಲಯ ಮನಸೂಯಾಸ್ತು ಪೋಷಿತಂ।। ವ್ಯಾಖ್ಯಾಮುದ್ರಂ ಕನಕದಂ ಜಟಾಮುಕುಟ ಧಾರಿಣಂ। ದ್ವಿಭುಜಂ ಸಿದ್ಧ ಸಂಸೇವ್ಯಂ ದತ್ತಾತ್ರೇಯ ನಮಾಮ್ಯಹಂ।।

ಹೇ ಗುರುವೇ ನಿನ್ನ ಕಣ್ಣು ತೆರೆದು

ಹೇ ಗುರುವೇ ನಿನ್ನ ಕಣ್ಣು ತೆರೆದು ನೋಡಲಾರೆಯಾ। ನಾ ತಾಳಲಾರೆನೂ।।ಪ।। ಶ್ರೀದತ್ತ ಗುರು ಎಂದು ನಾ ನೋಡಿ ಬಂದೆನೋ।।ಅ.ಪ.।। ಕಾಮಕ್ರೋಧಗಳಿಗೆ ಸಿಲುಕಿ. ಮೋಸ ಹೋದೆನೋ। ನೇಮ ನಿಷ್ಠೆ ನಿಯಮಗಳನು। ಅರಿಯದಾದೆನೋ। ಪ್ರೇಮದಿಂದಲೀ। ಸಾನುರಾಗದಿ। ಗುರು ನೀನು ಬಾರದಿದ್ದೊಡೇ। ನಾ ಕಾಯಲಾರೆನು। ಶ್ರೀದತ್ತ ಗುರು ಎಂದು ನಾನೋಡಿ ಬಂದೆನೊ।।1।। ಭಕ್ತಿ ಭಾವದಿಂದ ನಿನ್ನ। ಭಜಿಸುತಿರುವೆನೂ। ಮುಕ್ತಿಯನ್ನು ನೀಡು ಎಂದು ಬೇಡುತಿರುವೆನೂ। ಶಕ್ತಿವಂತನೇ ಶಾಂತಿದೂತನೆ। ಗುರುನೀನು ಬಾರದಿದ್ದೊಡೇ ನಾ ಕಾಯಲಾರೆನು। ಶ್ರೀದತ್ತ ಗುರು ಎಂದು ನಾನೋಡಿ ಬಂದೆನೋ।।2।। ಗಿರಿಯ ನಗರದಲ್ಲಿ ನಿಂತು ನೆಲಸಿದಾತನೇ। ಕಾರ್ಯ ಸಿದ್ಧಿ ಹನುಮನೊಡನೆ। ಕಾಯುವಾತನೇ। ಕರುಣೆ ತೋರುತಾ। ವರವ ನೀಡುತಾ ಗುರು ನೀನು ಬಾರದಿದ್ದೊಡೇ। ನಾ ಕಾಯಲಾರನೆ ಶ್ರೀ ದತ್ತ ಗುರುಎಂದು ನಾ ನೋಡಿ ಬಂದೆನೋ।।3।।

ದತ್ತ ನಿನ್ನ ಕಾಣದೆ ರಾಗ: ಸೌದಾಮಿನಿ–ಆದಿತಾಳ

ದತ್ತ ನಿನ್ನ ಕಾಣದೆ ಕಳವಳದಿಂದಲೀ ಮನ ಮರುಮರುಗುತ। ಸೊರಗುತಲಿರುವುದು।।ದತ್ತ।। ಶಾರದ ದಾಸಿವಂದಿತ ದತ್ತ ನಿನ್ನ ನಾಮವ ಪಾಡುತ ನಲಿಯುತಲಿರುವುದು।।ದತ್ತ।। ಧರ್ಮವನರಿಯದೆ ಕರ್ಮವನರಿಯದೆ ಧ್ಯಾನವನರಿಯದೆ ಮೌನವನರಿಯದೆ। ದಾರಿಯ ಕಾಣದಿಹೆ ದಡವನು ಸೇರಿಸು ದತ್ತ ನಿನ್ನ ದರುಶನಕೆ ಹಂಬಲಿಸಿ ಕಾದಿಹೆನು।।ದತ್ತ।।

ಜಯದೇವ ಭಕ್ತನಂತೆ ಜಗವ ನಾಮರೆಯೆನೋ ಭಕ್ತ ಮೀರಳ ತೆರದಿ ಪ್ರೇಮಿಸಲರಿಯನೊ। ಭಕ್ತಿ ಪ್ರೇಮವಿಲ್ಲವೆಂದು ಕಡೆಗಾಣಿಸದೆನ್ನ। ಮುಕ್ತಿಯ ಸೇರುವ ಮಾರ್ಗವ ತೋರೆನಗೆ।।ದತ್ತ।।

ದತ್ತ ಬಂದ ಜಗಕೆ **ರಾಗ: ಸಿಂಧುಭೈರವಿ–ಆದಿತಾಳ**

ದತ್ತ ಬಂದ ಜಗಕೆ ಗುರುದೇವ ದತ್ತ ಬಂದ ಜಗಕೆ। ಹತ್ತವತಾರವ ಎತ್ತಿದರೆಯೊಳು। ದತ್ತಾವತಾರದಿ ಭಕ್ತರ ಸಲಹಲು ।।ದತ್ತ।। ಅತ್ರಿ ಅನಸೂಯೆಯ ಪುತ್ರನಾಗಿ ಅವ। ಬಾಲಲೀಲೆಗಳ ತೋರಿ ನಲಿಸಲು। ಶ್ರೀಪಾದವಲ್ಲಭ ನಾಮದಿಂ ಧರೆಯೊಳು। ಭಕ್ತ ಬಂಧುಗಳ ಪೊರೆಯಲು ಇಳಿದು।।ದತ್ತ।। 1।। ನರಸಿಂಹ ಸರಸ್ವತಿ ನಾಮವ ಧರಿಸಿ। ಔದುಂಬರದಡಿ ವಾಸವ ನಡೆಸಿ। ಭಕ್ತ ಜನಗಳಿಗೆ ಮಹಿಮೆಯ ತೋರಿಸಿ। ಅಷ್ಟದರಿದ್ರಗೆ ಐಶ್ವರ್ಯ ಕರುಣಿಸಿ।।2।। ತೆರಳಿದ ಪ್ರಾಣವ ದೇಹದಿ ಬರಿಸಿ ಸತೀ ಧರ್ಮವನು ಇಳೆಯೊಳು ಬೋಧಿಸಿ। ನಾಲ್ಕು ವೇದಗಳ ಸಾರವ ಬೋಧಿಸೆ।।ದತ್ತ।।3।। ದೇವಿ ಶಾರದದಾಸಿಯ ಪಾಲಿಸಿ। ಆಸ್ತಿಕ ಮನುಜರ ಮನದಲಿ ನೆಲಸಿ। ನಾಸ್ತಿಕ ಮನುಜರ ಮನವನು ಕಲಕಿಸಿ। ಆಸ್ತಿಕ ನಾಸ್ತಿಕ ಜನಗಳ ಪಾಲಿಸೆ।।ದತ್ತ।।4।।

ಯೋಗಿ ಮನೆಗೆ ಬಂದಾ **ರಾಗ: ಮೋಹನ**

ಯೋಗಿ ಮನೆಗೆ ಬಂದಾ ಶ್ರೀ ಗುರು ದೇವ ಮನೆಗೆ ಬಂದಾ। ಕಾಲಲ್ಲಿ ಪಾದುಕಾ ಕೈಯಲಿ ದಂಡಾ ಬಾಲರವಿಯಾ ಕಳೆಯಾ.... ಆ.... ।।ಯೋಗಿ।। ಜೋಲುತಿರಲು ಕೊರಳೊಳು ರುದ್ರಾಕ್ಷಿ। ಜೋಳಿಗೆ ಬಗಲೊಳು ಶ್ರೀಪಾದರಕ್ಷೆ। ಕಾಷಾಯಾಂಬರದಾ ಆ..... ಆ..... ಕಾಷಾಯಾಂಬರದಾ ಆ.... ಆ....।।ಯೋಗಿ।। ಮಸ್ತಕದಲಿ ಜಡೆ ಶೋಭಿಸುತಲ್ಲಿ। ಕಸ್ತೂರಿ ತಿಲಕ ಚಂದನ ಹಣೆಯಲ್ಲಿ। ವಿಸ್ತರ ನಗೆ ಮುಖದ ಆ.... ಆ.... ವಿಸ್ತಾರ ನಗೆ ಮುಖದ ಆ.... ಆ....।।ಯೋಗಿ।। ಕುರುದ್ವೀಪದಿ ಶ್ರೀಕೃಷ್ಣೆಯ ತಟದಿ। ಸರಸದಿ ಪಾಡಿಪ ಶ್ರೀಪಾದಯೋಗಿ। ಪರಮ ಪುರುಷ ಶ್ರೀಹರಿ.... ಇ.... ಇ..... ಪರಮ ಪುರುಷ ಶ್ರೀಹರಿ.....।।ಯೋಗಿ।।

ಇಂದುಕೋಟಿ ತೇಜಕಿರಣ **ರಾಗ: ಕಲ್ಯಾಣಿ**

ಇಂದುಕೋಟಿ ತೇಜಕಿರಣ। ಸಿಂಧು ಭಕ್ತ ವತ್ಸಲಂ। ನಂದನಾತ್ರಿ ಸೂನುದತ್ತ। ಇಂದಿರಾಕ್ಷ ಶ್ರೀಗುರುಂ।। ಗಂಧಮಾಲ್ಯ ಅಕ್ಷತಾದಿ ವೃಂದ ದೇವ ವಂದಿತಂ।। ವಂದಯಾಮಿ। ನಾರಸಿಂಹ। ಸರಸ್ವತೀಶ ಪಾಹಿಮಾಂ।।1।। ಮಾಯಪಾಶ ಅಂಧಃಕಾರ। ಛಾಯ ದೂರ ಭಾಸ್ಕರಂ। ಆಯತಾಕ್ಷ ಪಾಹಿಶ್ರೀಯಾ। ವಲ್ಲಭೇಶ ನಾಯಕಂ। ಸೇವ್ಯಭಕ್ತವೃಂದ ವರದ। ಭೂಯಭೂಯ ನಮಾಮ್ಯಹಂ। ವಂದಯಾಮಿ ನಾರಸಿಂಹ। ಸರಸ್ವತೀಶ ಪಾಹಿಮಾಂ।।2।। ಚಿತ್ರಜಾದಿವರ್ಗಷಟ್ಕ। ಮತ್ತವಾರಣಾಂಕುಶಂ। ತತ್ವಸಾರಶೋಭಿತಾತ್ಮ। ದತ್ತ ಶ್ರೀಯಾ ವಲ್ಲಭಂ। ಉತ್ತಮಾವತಾರ ಭೂತ। ಕರ್ತೃಭಕ್ತವತ್ಸಲಂ। ವಂದಯಾಮಿ ನಾರಸಿಂಹ। ಸರಸ್ವತೀಶ ಪಾಹಿಮಾಂ।।3।। ವ್ಯೋಮ ಆಪವಾಯು ತೇಜ ಭೂಮಿ ಕರ್ತೃಮೀಶ್ವರಂ। ಕಾಮಕ್ರೋಧ ಮೋಹರಹಿತ। ಸೋಮಸೂರ್ಯ ಲೋಚನಂ। ಕಾಮಿತಾರ್ಥ ಧಾತೃ ಭಕ್ತ। ಕಾಮಧೇನು ಶ್ರೀಗುರುಂ। ವಂದಯಾಮಿ ನಾರಸಿಂಹ। ಸರಸ್ವತೀಶ ಪಾಹಿಮಾಂ।।4।। ಮಂಡಲೀಕ ಆಯತಾಕ್ಷ। ಕುಂಡಲೇಂದು ತೇಜಸಂ। ಚಂಡದುರಿತ ಖಂಡನಾರ್ಥ। ದಂಡಧಾರಿ ಶ್ರೀಗುರಂ। ಪುಂಡರೀಕ ಮೌಲಿ ಮಾರ್ತಾಂಡ ಭಾಸಿತಾನನಂ। ವಂದಯಾಮಿ ನಾರಸಿಂಹ। ಸರಸ್ವತೀಶ ಪಾಹಿಮಾಂ।।5।। ವೇದಶಾಸ್ತ್ರ ಸ್ತುತ್ಯಪಾದ। ಆದಿಮೂರ್ತಿ ಶ್ರೀಗುರಂ। ನಾದಬಿಂದು ಕಲಾತೀತ ಕಲ್ಪಪಾದ ಸೇವ್ಯೆಯಂ। ಸೇವ್ಯಭಕ್ತವೃಂದ ವರದ। ಭೂಯಭೂಯ ನಮಾಮ್ಯಹಂ। ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ।।6।। ಅಷ್ಟಯೋಗ ತತ್ವನಿಷ್ಠ। ತುಷ್ಟಜ್ಞಾನವಾರಿಧಿಂ। ಕೃಷ್ಣವೇಣಿ ತೀರವಾಸ। ಪಂಚನದೀ ಸಂಗಮಂ। ಕಷ್ಟದೈನ್ಯ ದೂರ ಭಕ್ತ। ತುಷ್ಟಕಾಮ್ಯದಾಯಕಂ। ವಂದಯಾಮಿ ನಾರಸಿಂಹ। ಸರಸ್ವತೀಶ ಪಾಹಿಮಾಂ।।7।। ನಾರಸಿಂಹ ಸರಸ್ವತೀಶ ನಾಮ ಅಷ್ಟಮೌಕ್ತಿಕಂ। ಹಾರಕೃತ ಶಾರದೇನ। ಗಂಗಾಧರ ಆತ್ಮಜಂ। ಧಾರಿಣೀಕ ದೇವದೀಕ್ಷ। ಗುರುಮೂರ್ತಿ ಕೋಶಿತಂ। ಪರಮಾತ್ಮಾನಂದ ಶ್ರೀಯಾಪುತ್ರ ಪೌತ್ರದಾಯಕಂ।।8।। ನಾರಸಿಂಹ ಸರಸ್ವತೀಶ ಅಷ್ಟಕಂಚಯಃ ಪಠೇತ್

ಘೋರ ಸಂಸಾರ ಸಿಂಧುತಾರುಣಾಖ್ಯ ಸಾಧನಂ। ಸಾರಜ್ಞಾನ ದೀರ್ಘ ಆಯು। ರಾರೋಗ್ಯದಿ ಸಂಪದಂ। ಚಾರುವರ್ಗ ಕಾಮ್ಯಲಾಭ ನಿತ್ಯಮೇವಯಃ ಪಠೇತ್।।

ಅಮರ ವರ್ಗಕೆ ಅಭಯ ಸಾರಿದಿ **ರಾಗ: ಕುರಂಜಿ**

ಅಮರ ವರ್ಗಕೆ ಅಭಯ ಸಾರಿದಿ। ಮೂಲ ಸದ್ಗುರು ಪೀಠದಿ ನೆಲಸಿದಿ। ಅನುಸೂಯಾಸುತನೀ ದತ್ತಮೂರುತಿ। ಅತ್ರಿನಂದನಾ ದತ್ತ ಮೂರುತಿ।।ಪ।। ಪೀಠ ಪುರದೊಳು ಮೈಯತೋರ್ದವಾ। ಕುರವ ಪುರದೊಳು ನೆಲೆಸಿ ನಿಂತವಾ। ಯೋಗಿರಾಜ ಶ್ರೀಪಾದ ಗುರುಪತಿ। ಅತ್ರಿನಂದನಾ ದತ್ತ ಮೂರುತಿ।।ಅತ್ರಿ।। ಅಂಬೆ ಮಾಧವಾ ತನಯ ನರಹರಿ। ಕ್ಷೇತ್ರ ನಿನ್ನದೂ ಗಾಣಗಾಪುರ। ಯತಿಪತಿ ನರಸಿಂಹ ಸರಸ್ವತಿ।।ಅತ್ರಿ।। ರಾಯರಂಗರು ನಿನ್ನ ದಾಸರು ಬಡವ ಬಲ್ಲಿದಾರೆಲ್ಲ ಭಕ್ತರು। ಸರ್ವಶಕ್ತ ನೀ ಜ್ಞಾನ ಕುಲಪತಿ।। ಅತ್ರಿ।। ನಿನ್ನ ಚರಿತೆಯೂ ವೇದ ಸಮಬಲ। ನಿನ್ನುಪಾಸನಾ ಸುಖದ ಸವಿಫಲಾ। ಸರ್ವಜನರಿಗೂ ನೀನೆ ಸದ್ಗತಿ।।ಅತ್ರಿ।। ಯೋಗಿ ವೇಷವೋ ಭೋಗಿ ವೇಷವೋ। ಕಂಡ ಭಕ್ತರಾದೆಂಥ ಭಾಗ್ಯವೋ। ಮನಕೆ ನಿಲುಕದಾ ಮಧುರಮಯಾಕೃತಿ ।।ಅತ್ರಿ।। ಆರು ಕೈಗಳೂ ಮೂರು ಮಸ್ತಕ। ಎರಡು ಕೈಗಳು ಒಂದೆಯೇ ಮುಖ। ತ್ರಿಗುಣ ಜನಕನೀ ವಿಶ್ವದಾಕೃತಿ।।ಅತ್ರಿ।। ಕರ್ಮವೆಲ್ಲವೂ ನಿನ್ನುಪಾಸನಾ। ಭೋಗವೆಲ್ಲವೂ ನಿನ್ನ ಭಾವನಾ। ನೀಡು ನಿನ್ನೊಳು ಏಕ ಭಕುತಿ।।ಅತ್ರಿ।। ಒಂದರೆಕ್ಷಣ ನಿತ್ಯ ಸ್ಮರಣೆಯು। ಗೈವ ಭಾವಿಕಂ ನಿತ್ಯ ನಿರ್ಭಯಾ। ಸೊಲ್ಲು ಸೊಲ್ಲಿಗೂ ನಿನ್ನ ಕೀರುತಿ ಹಾಡಿಕೊಳಲಿ ಯೋಗೀಶ ಭಾರತಿ।।ಅತ್ರಿ।।

ತ್ರಿಮೂರ್ತಿರೂಪ ದತ್ತಾತ್ರೇಯ

ತ್ರಿಮೂರ್ತಿರೂಪ ದತ್ತಾತ್ರೇಯ। ತ್ರಿಗುಣಾತೀತ ದತ್ತಾತ್ರೇಯ। ಅನುಸೂಯ ತನಯ ದತ್ತಾತ್ರೇಯ। ಆಶ್ರಿತ ರಕ್ಷಕ ದತ್ತಾತ್ರೇಯ।।ಪ।। ಆದಿದೇವನ ಅಂಶವೇ ಆದಿ ಬ್ರಹ್ಮನ ರೂಪವೇ। ಆದಿಮೂಲ ಅತ್ರಿ ಮುನೀಂದ್ರನ। ಅತಿಶಯ ಪ್ರೀತಿಯ ಅವತಾರವೇ।।1।। ಸತಿಯ ಪುಣ್ಯದಾ ಮೂರ್ತಿಯೇ। ಸರ್ವವೇದಗಳ ಮೂರ್ತಿಯೇ। ದಿಗಂಬರ ನಾಥ ಔದುಂಬರ ವಾಸ। ಜ್ಞಾನ ದೇವಗುರು ದೇವನೇ।।2।।

ಹೇ ಶ್ರೀಪಾದ ಶ್ರೀ ಗುರುವರಾ **ರಾಗ: ಸಾವೇರಿ**

ಹೇ ಶ್ರೀಪಾದ ಶ್ರೀ ಗುರುವರಾ। ನಿ ಕಾಯ್ವೆ ದಯಾಸಾಗರ। ನೀ ಜಗದೀಶ್ವರಾ ನೀ ಹೃದಯೇಶ್ವರಾ ನೀ ಪರಿಪಾಹಿ ಭಕ್ತೋದ್ಧಾರಾ।।ಪ।। ಈ ಸಂಸಾರದಾಯಾತನಾ ಬಗೆಹರಿಸೈ ಕರುಣಾ ಘನಾ। ಕೊಡು ಸ್ಥಿರ ಭಾವನಾ ನಿನ್ನ ಪದರಂಜನಾ ಸತಿ ಅನುಸೂಯ ಪ್ರಿಯನಂದನ ಬ್ರಹ್ಮನಂದಾ ಚಿದ್ಘನಾ ಪರಮಾತ್ಮ ಸದಾ ಪೂರ್ಣ।।1।। ಶ್ರೀ ನರಸಿಂಹ ಗುರುಪಾದುಕಾ ಈ ಭವಸಿಂಧು ಪರಿಪಾದುಕಾ ಈಶ ಕೃಷ್ಣ ತಟವಾಸಿ ಔದುಂಬರಾ ದೇವ ಅಪಧಾತ ಮಹಿಮಾಸ್ಪದಾ ಕಾಶಾಯ ವರ್ಣಾಂಬರ ಗುರು ತ್ರಿಮೂರ್ತಿ ಸುರ ಸುಂದರ ಶ್ರೀ ನಾರಾಯಣ ಈ ಭವ ಭಂಜನ ಗುರು ನೀನೆ ಸದಾಶಂಕರಾ।।3।।

ದತ್ತಾತ್ರೇಯ ತ್ರಿಮೂರ್ತಿ ರೂಪ **ರಾಗ: ಹಿಂದೋಳ-ಆದಿತಾಳ**

ದತ್ತಾತ್ರೇಯ ತ್ರಿಮೂರ್ತಿ ರೂಪ। ತ್ರಿಭುವನ ಲೋಕ ರಕ್ಷಕ।।ಪ।। ಕಾಮಧೇನು ಕಲ್ಪವೃಕ್ಷ ಕಾಮಿತ ಫಲದಾಯಕ। ದಂಡಕಮಂಡಲ ಶೂಲ ಢಮರುಗ ಶಂಖಚಕ್ರ ಶೋಭಿತ।।1।। ಉತ್ತಮ ಉತ್ತಮ ಪುರುಷೋತ್ತಮ। ಪೂರ್ಣಚಂದ್ರ ಪ್ರಕಟಿತ। ಭವ ಬಂಧ ಭಯ ದೂರ ಭಕ್ತ ಕರುಣಾಸಾಗರ।।2।। ಸಹ್ಯಾದ್ರಿರೂಪ ಸಚ್ಚಿದಾನಂದ ಶ್ರೀ ಗುರುದತ್ತ ಸ್ವರೂಪನೇ। ಕೃತ್ತಿಕಾಸಾರ ಸಿದ್ಧಾನುಸಾರ ಸಿದ್ಧದೂತ ಮನೋಹರ।।3।।

ದತ್ತ ದಿಗಂಬರನೆ ವಂದಿಪೆನಾ **ರಾಗ: ಶುಭಪಂತುವರಾಳಿ**

ದತ್ತ ದಿಗಂಬರನೆ ವಂದಿಪೆನಾ ಕಾಯ್ವೆ ನೀ...। ಕರುಣಾ ಸಾಗರ ವಲ್ಲಭ ರಾಯ.....।।ಪ।। ವಾಡಿಯ ವಾಸಾ ಹೇ ಜಗದೀಶಾ। ನೀಗಿಸು ಆಶಾ ಬೇಡುವೆ ಶ್ರೀಶಾ। ಚೈತನ್ಯಾಂಬುಧಿ ಆತ್ಮ ಸ್ವರೂಪ।।1।। ವಿಷಯದೊಳಿರುವ ಈ ಘನ

ಪ್ರೇಮಾ। ನಿನ್ನೊಳಗಿರಲೈ ನಿರ್ಗುಣ ಧಾಮಾ। ಬ್ರಹ್ಮಾನಂದ ಶಂಕರರೂಪ...।।2।। ನಿತ್ಯಾನಂದ, ಸತ್ಯಸ್ವರೂಪ, ಮಿಥ್ಯಾ ಕಲ್ಪನೆ ಈ ಜಗ ನಿನ್ನೊಳ್, ಸದ್ಗುರುನಾಥಾ ಹೇ ಅವಧೂತ...।।3।।

ಜಟಾಧರಂ ಪಾಂಡುರಂಗಂ ಶೂಲಹಸ್ತಂ (ದತ್ತಾತ್ರೇಯ ಸ್ತೋತ್ರ)

ಜಟಾಧರಂ ಪಾಂಡುರಂಗಂ ಶೂಲಹಸ್ತಂ ಕೃಪಾನಿಧಿಂ। ಸರ್ವರೋಗಹರಂ ದೇವಂ ದತ್ತಾತ್ರೇಯ ಮಹಂಭಜೇ।। ಅಸ್ಯ ಶ್ರೀ ದತ್ತಾತ್ರೇಯ ಸ್ತೋತ್ರ ಮಂತ್ರಸ್ಯ ಭಗವಾನ್ ನಾರದ ಋಷಿಃ। ಅನುಷ್ಟುಪ್ ಚಂದಃ। ಶ್ರೀದತ್ತ ಪರಮಾತ್ಮಾ ದೇವತಾ। ಶ್ರೀದತ್ತ ಪ್ರೀತ್ಯರ್ಥೇ ಜಪೇ ವಿನಿಯೋಗಃ।। ಜಗದುತ್ಪತ್ತಿ ಕರ್ತೇಚ ಸ್ಥಿತಿ ಸಂಹಾರ ಹೇತವೇ। ಭವಪಾಶ ವಿಮುಕ್ತಾಯ ದತ್ತಾತ್ರೇಯ ನಮೋಸ್ತುತೇ।।1।। ಜರಾಜನ್ಮ ವಿನಾಶಾಯ ದೇಹಶುದ್ಧಿ ಕರಾಯಚ। ದಿಗಂಬರ ಮಯಾ ಮೂರ್ತೇ ದತ್ತಾತ್ರೇಯ ನಮೋಸ್ತುತೇ।।2।। ಕರ್ಪೂರ ಕಾಂತಿದೇಹಾಯ. ಬ್ರಹ್ಮಮೂರ್ತಿ ಧರಾಯಚ। ವೇದಶಾಸ್ತ್ರ ಪರಿಜ್ಞಾಯ। ದತ್ತಾತ್ರೇಯ ನಮೋಸ್ತುತೇ।।3।। ಹ್ರಸ್ವ ದೀರ್ಘಕೃಶ ಸ್ಥೂಲ ನಾಮಗೋತ್ರ ವಿವರ್ಜಿತಾ। ಪಂಚಭೂತ ಪ್ರದೀಪ್ತಾಯ। ದತ್ತಾತ್ರೇಯ ನಮೋಸ್ತುತೇ।।4।। ಯಜ್ಞಭೋಕ್ತೈ ಚ ಯಜ್ಞಾಯ। ಯಜ್ಞರೂಪಾಯಧರಾಯಚ। ಯಜ್ಞಪ್ರಿಯಾಯ ಸಿದ್ಧಾಯ। ದತ್ತಾತ್ರೇಯ ನಮೋಸ್ತುತೇ।।5।। ಆದೌ ಬ್ರಹ್ಮಾ ಮಧ್ಯೆ ವಿಷ್ಣು ರಂದೇ ದೇವಃ ಸದಾಶಿವಃ ಮೂರ್ತಿತ್ರಯ ಸ್ವರೂಪಾಯ ದತ್ತಾತ್ರೇಯ ನಮೋಸ್ತುತೇ।।6।। ಭೋಗಾಲಲಾಯ ಭೋಗಾಯ। ಯೋಗಯೋಗ್ಯಾಯ ಧಾರಿಣೇ। ಜಿತೇಂದ್ರಿಯ ಜಿತಜ್ಞಾಯ ದತ್ತಾತ್ರೇಯ ನಮೋಸ್ತುತೇ।।7।। ದಿಗಂಬರಾಯ ದಿವ್ಯಾಯ। ದಿವ್ಯರೂಪಧರಾಯಚ। ಸತಮೋದಿತ (ದೋರಿತ) ಪರಬ್ರಹ್ಮಾ ದತ್ತಾತ್ರೇಯ ನಮೋಸ್ತುತೇ।।8।। ಜಂಬೂದ್ವೀಪೇ ಮಹಾಕ್ಷೇತ್ರೇ। ಮಂತ (ಮಂತ್ರ)ಪುರವಾಸಿನೇ ಜಯಮಾನಸತಾಂ ದೇವ। ದತ್ತಾತ್ರೇಯ ನಮೋಸ್ತುತೇ।।9।। ಭಿಕ್ಷಾಟನಂ ಗೃಹೇ ಗ್ರಾಮೇ। ಪಾತ್ರಂ ಹೇಮ ಮಯಂಕರೇ। ನಾನಾಸ್ವಾದ ಮಯಿ ಭಿಕ್ಷಾ ದತ್ತಾತ್ರೇಯ ನಮೋಸ್ತುತೇ।।10।। ಬ್ರಹ್ಮಜ್ಞಾನಮಯೀ ಮುದ್ರಾ। ವಸ್ತ್ರೇ ಚೌಕಾರ ಭೂತಲೇ। ಪ್ರಜ್ಞಾನ ಧನ ಬೋದಾಯ। ದತ್ತಾತ್ರೇಯ ನಮೋಸ್ತುತೇ ।।11।। ಅವಧಾನ ಸದಾನಂದ। ಪರಬ್ರಹ್ಮ ಸ್ವರೂಪಿಣೇ। ವಿದೇಹ ದೇಹ ರೂಪಾಯ। ದತ್ತಾತ್ರೇಯ ನಮೋಸ್ತುತೇ।।12।। ಸತ್ಯರೂಪಾ ಸದಾಚಾರ ಸತ್ಯಧರ್ಮ ಪರಾಯಣ। ಸತ್ಯಾಶ್ರಯ ಪರೋಕ್ಷಾಯ ದತ್ತಾತ್ರೇಯ ನಮೋಸ್ತುತೇ।।13।। ಶೂಲಹಸ್ತ ಗದಾಪಾಣೇ। ವನಮಾಲಾಸುಕಂಧರಾ। ಯಜ್ಞಸೂತ್ರಧರ ಬ್ರಹ್ಮನ್। ದತ್ತಾತ್ರೇಯ ನಮೋಸ್ತುತೇ।।14।। ಕುರುಕ್ಷೀರ ಸ್ವರೂಪಾಯ। ಪರಾತ್ಪರತಿರಾಯಚ। ದತ್ತಮುಕ್ತಿ ಪರಸ್ತೋತ್ರಾ। ದತ್ತಾತ್ರೇಯ ನಮೋಸ್ತುತೇ।।15।। ದತ್ತ ವಿದ್ಯಾಢ್ಯ ಲಕ್ಷ್ಮೀಶ। ದತ್ತ ಸ್ವಾತ್ಮ ಸ್ವರೂಪಿಣೇ। ಗುಣ ನಿರ್ಗುಣರೂಪಾಯ। ದತ್ತಾತ್ರೇಯ ನಮೋಸ್ತುತೇ।।16।। ಶತೃನಾಶಕರಂ ಸ್ತೋತ್ರಂ ಜ್ಞಾನವಿಜ್ಞಾನ ನಾಶನಂ। ಸರ್ವಪಾಪ ಶಮಂ ಯಾತಿ। ದತ್ತಾತ್ರೇಯ ನಮೋಸ್ತುತೇ।।17।। ಇದಂ ಸ್ತೋತ್ರ ಮಹದ್ದಿವ್ಯಂ। ದತ್ತ ಪ್ರತ್ಯಕ್ಷ ಕಾರಕಂ। ದತ್ತಾತ್ರೇಯ ಪ್ರಸಾದಾಚ್ಚ। ನಾರದೇನ ಪ್ರಕೀರ್ತಿತಂ. ಇತಿ ಶ್ರೀ ನಾರದ ವಿರಚಿತಂ। ದತ್ತಾತ್ರೇಯ ಸ್ತೋತ್ರಂ ಸಂಪೂರ್ಣಂ।।

ಶ್ರೀಪಾದ ಶ್ರೀವಲ್ಲಭ ತ್ವಂ ಸದೈವ (ದತ್ತಾತ್ರೇಯ ಪ್ರಾರ್ಥನಾ ಮಂಚಕಂ)

ಶ್ರೀಪಾದ ಶ್ರೀವಲ್ಲಭ ತ್ವಂ ಸದೈವ। ಶ್ರೀದತ್ತಾ ಸ್ಮಾನ್ಪಾಹಿ ದೇವಾದಿದೇವ। ಭಾವಗ್ರಾಹ್ಯಕ್ಲೇಶ ಹಾರಿನ್ ಸುಕೀರ್ತೇ ಘೋರಾತ್ಕಷ್ಟಾದುದ್ಧರಾಸ್ಮಾನ್ ನಮಸ್ತೇ।।1।। ತ್ವಂ ನೋ ಮಾತಾ ತ್ವಂ ಪಿತಾಪ್ತೋಽಧಿಪಸ್ತ್ವಂ ತ್ರಾತಾ ಯೋಗಕ್ಷೇಮಕೃತ್ಸದ್ಗುರು ಸ್ತ್ವಂ। ತ್ವಂ ಸರ್ವಸ್ವಂ ನೋ ಪ್ರಭೋ ವಿಶ್ವಮೂರ್ತೇ। ಘೋರಾತ್ಕರಾಷ್ಟಾದುದ್ಧರಾಸ್ಮಾನ್ ನಮಸ್ತೇ।।2।। ಪಾಪಂ ತಾಪಂ ವ್ಯಾಧಿಮಾಧಿಂ ಚ ದೈನ್ಯಂ। ಭೀತಿಂ ಕ್ಲೇಶಂ ತ್ವಂ ಹರಾಶು ತ್ವದನ್ಯಂ। ತ್ರಾತಾರಂ ನೋ ವೀಕ್ಷ ಈಶಾಷ್ಟಮೂರ್ತೇ ಘೋರಾತ್ಕಷ್ಟಾದುದ್ಧರಾಸ್ಮಾದ್ ನಮಸ್ತೇ।।3।। ನಾನ್ಯಸ್ತ್ರಾತಾ ನಾಪಿ ದಾತಾ ನ ಭರ್ತಾ ತತ್ತೋದೇವ ತ್ವಂ ಶರಣ್ಯೋಽಘಹರ್ತಾ। ಕುರ್ವಾತ್ರೇಯಾನುಗ್ರಹಂ ಪೂರ್ಣ ರಾತೀ। ಘೋರಾತ್ಕಷ್ಟಾದುದ್ಧರಾಸ್ಮಾನ್ ನಮಸ್ತೇ।।4।। ದರ್ಮಂ ಪ್ರೀತಿಂ ಸನ್ಮತಿಂ ದೇವಭಕ್ತಿಂ ಸತ್ಸಂಗಾಪ್ತಿಂ ದೇಹ ಭಕ್ತಿಂ ಚ ಮುಕ್ತಿಂ। ಭಾವಾಸಕ್ತಿಂ ಚಾಽಖಿಲಾನಂದ ಮೂರ್ತೇ ಘೋರಾ ತ್ಕಷ್ಟಾದುದ್ಧರಾಸ್ಮಾನ್ ನಮಸ್ತೇ।।5।। ಶ್ಲೋಕಪಂಚಕದೋತದ್ಯೋ ಲೋಕಮಂಗಲವರ್ಧನಂ। ಪ್ರಪಠೇನ್ನಿಯತೋ ಭಕ್ತ್ಯಾ ಸಶ್ರೀದತ್ತಪ್ರಿಯೋ ಭವೇತ್।।6।।

ಶ್ರೀಪತಿ ಸರಸ್ವತಿ ಗಣಪತಿಗೆರಗುವೆ (ದತ್ತಾತ್ರೇಯರ ಹುಟ್ಟು)

ಶ್ರೀಪತಿ ಸರಸ್ವತಿ ಗಣಪತಿಗೆರಗುವೆ ರಾಮ ರಾಮ। ಲೋಕರಕ್ಷಕ ವೆಂಕಟೇಶನೆ ಗತಿನಮಗೆ ರಾಮರಾಮ।।1।। ಸತ್ಯ ಅಸತ್ಯ ಯಾವುದೆಂದರಿಯೇನೊ ರಾಮರಾಮ। ಯುಕ್ತಾಯುಕ್ತ ಒಂದೂ ನಾನರಿಯೆನುರಾಮರಾಮ।।2।। ಮತ್ತೆ ಪುರಾಣದತತ್ವದ ಕಥೆಯಿದು ರಾಮ ರಾಮ। ಭಕ್ತಜನರಿಂದ ಹೇಳಿಸಿ ಕೇಳುವೆ ನಾನು ರಾಮರಾಮ।।3।। ವೇದ ಪುರಾಣದ ಶಾಸ್ತ್ರದ ಕಥೆಯಿದುರಾಮರಾಮ। ಭಾಗವತ ಜನರಿಂದ ಹೇಳಿಸಿಕೇಳುವೆ ರಾಮರಾಮ।।4।। ಅರ್ಧನಾರಿ ಸರಸ್ವತಿ ಲಕ್ಷ್ಮಿ ದೇವಿಯರು ರಾಮರಾಮ। ಅರ್ಧಾಸನರೆಲ್ಲಒಡ್ಡೋಲಗ ಕೂಡೆ ರಾಮರಾಮ ।।5।। ಉತ್ಪತ್ತಿ ಸ್ಥಿತಿಲಯಕ್ಕೊಡೆಯರು ಮೂವರು ರಾಮರಾಮ। ಮತ್ತೆ ವಿಚಾರವ ಮಾಡುತ ಲಿದ್ದರು ರಾಮರಾಮ।।6।। ಲೋಕವಾರ್ತೆಗಳಾಡುತಲಿದ್ದರು ರಾಮರಾಮ। ಭೂತಳದಲಿ ಪತಿವ್ರತೆ ಯಾರೆಂದು ರಾಮರಾಮ।।7।। ಅತ್ರಿಮಹಾಮುನಿ ಅನುಸೂಯದೇವಿಯು ರಾಮರಾಮ। ಅನುಸೂಯಾ ದೇವಿಯೆ ಪತಿವ್ರತೆ ಎಂದರೆ ರಾಮರಾಮ।।8।। ಆ ಮಾತುಕೇಳಿ ಸರಸ್ವತಿ ಪಾರ್ವತಿ ರಾಮರಾಮ। ಶ್ರೀ ಮಹಾಲಕ್ಷ್ಮಿ ಸಿಂಹಾಸನವಿಳಿದರು ರಾಮರಾಮ ।।9।। ಆಕೆಯ ವ್ರತಗಳ ಕೆಡಸಿ ಬಂದಲ್ಲದೆ ರಾಮರಾಮ। ಏಕಾಂತದ ಸೇವೆಗೆ ಒಲ್ಲೆನೆಂದರು ರಾಮರಾಮ ।।10।। ಅಲ್ಲಿಂದಹೊರಟರೆ ತ್ರಿಮೂರ್ತಿಗಳು ರಾಮರಾಮ। ಅತಿ ಮಹಾಮುನಿ ಆಶ್ರಮಕಾಗಿ ರಾಮರಾಮ।।11।। ಉಟ್ಟರೆ ತಳಿಲಗಾವಿಯ ಧೋತ್ರಂಗಳ ರಾಮರಾಮ।। ತಂದಿಟ್ಟರೆ ಪವಿತ್ರದ ಉಂಗುರು ಬೆರಳಿಗೆ ರಾಮರಾಮ।।12।। ಪಟ್ಟವರ್ಣಗಳ ಊರ್ದ್ವ ಪುಂಡರಿ ಗಳ ರಾಮರಾಮ। ಬಂದ ಅತ್ರಿ ಮಹಾಮುನಿ ಸತಿ ಒಡನೆಂದರು ರಾಮರಾಮ ।।13।। ಸುತ್ತಿ ಬಳಲಿ ಬಹಳ ಬಿಸಿಲಾಗೆ ಬಂದೆವು ರಾಮರಾಮ। ಅತಿಥಿ ಸತ್ಕಾರವ ಮಾಡಬೇಕೆಂದರು ರಾಮರಾಮ।।14।। ಉತ್ತಮ ವೆಂದಳೆ ಪರಮ ಪತಿವ್ರತೆ ರಾಮರಾಮ। ಪತಿಯ ಕಮಂಡಲದ ಉದಕವ ತಂದಳು ರಾಮರಾಮ।।15।। ಪತಿಯ ನೆನೆದಾಳುಶ್ರೀಪತಿಯ ನೆನೆದಾಳು ರಾಮರಾಮ। ಪತಿಯ ಕಮಂಡಲ ಉದಕವ ತಂದಳು ರಾಮರಾಮ।।16।। ಕೊಟ್ಟಳೆ ಮಣಿಗಳ ಇಟ್ಟಳೆ ಉದಕವ ರಾಮರಾಮ। ತಂಡಿಟ್ಟಳೆ ಸಿಂಹಾಸನ ಗದ್ದುಗೆಗಳ ರಾಮರಾಮ।।17।। ಪಂಚಭಕ್ಷ ಪಾಯಸ ಪರಮಾನ್ನವು ರಾಮರಾಮ। ವಂಚನೆ ಇಲ್ಲದೆ ಎಡೆಮಾಡುತ್ತಿದ್ದಳು ರಾಮರಾಮ। ।18।।ಉಟ್ಟಿದ್ದ ಬಿಚ್ಚಿ ಹುಟ್ಟಿದ್ದ ಮಾತ್ರದಲಿ ರಾಮರಾಮ। ತಂದಿಟ್ಟರಲ್ಲದೆ ತುತ್ತಿಡೆವೆಂದರು ರಾಮರಾಮ।।19।। ಅಂಬರಬಿಚ್ಚಿ ದಿಗಂಬರ ವೇಷದಲಿ ರಾಮರಾಮ। ತಂದಿಕ್ಕದಲ್ಲದೆ ತುತ್ತಿಡೆ ಪತಿವ್ರತೆ ರಾಮರಾಮ।।20।। ಉತ್ತಮ ವೆಂದಳೆಪರಮಪವಿತ್ರತೆ ರಾಮರಾಮ। ಕಮಂಡ್ಲದುದಕವ ಅವರ ಮೇಲೆ ತಳೆಯಲು ರಾಮರಾಮ।।21।। ಪತಿಯ ಕಮಂಡಲದ ಉದಕ ದಿಂದಾಗಿ ರಾಮರಾಮ। ಅಂಬೆಗಾಲಿಕ್ಕುತ ಹಸುಮಕ್ಕಳಾದರು ರಾಮರಾಮ।।22।। ಉಟ್ಟಿದ್ದ ಸೀರೆಯ ಬಿಚ್ಚಿ ಬಿಸಾಡಿದಳು ರಾಮರಾಮ। ಬಂದೆತ್ತಿ ಕೊಂಡಳು ತೋಳಿಂದ ತೊಡೆಯ ಮೇಲೆ ರಾಮರಾಮ।।23।। ತುತ್ತು ಕಯ್ಯಲಿಕೊಟ್ಟು ಮೊಲೆಯ ನುಣ್ಣಿಸಿದಳು ರಾಮರಾಮ। ನೆತ್ತಿಯ ನೂದಿ ಹಾಲು ಬೆಣ್ಣೆಯ ನಿತ್ತಳು ರಾಮರಾಮ।।24।। ಹಸ್ತವ ತೊಳೆದಳು ವಸ್ತ್ರದಲಿ ಒತ್ತಿದಳು ರಾಮರಾಮ। ತಂದಿಟ್ಟಳು ಮೂವರ ತೊಟ್ಟಿಲ ಒಳಗೇ ರಾಮರಾಮ।।25।। ಪಟ್ಟಾವಳಿಸೀರೆ ತಾನೆರೆದುಟ್ಟಳು ರಾಮರಾಮ। ಮುತ್ತು ಮಾಣಿಕ್ಯದಾಭರಣವನಿಟ್ಟಳು ರಾಮರಾಮ।।26।। ಸಾರಾವಳಿ ಸೀರೆ ತಾನೆರೆದುಟ್ಟಳು ರಾಮರಾಮ। ನೀಲಮಾಣಿಕ್ಯದಾ ಭರಣವನಿಟ್ಟಳೆ ರಾಮರಾಮ।।27।। ನೀಲವರ್ಣನೆ ಲಾಲಿ ನೀಲಕಂಠನೆ ಲಾಲಿ। ನೀರಜಾಕ್ಷನೆ ಲಾಲಿ ಎಂದು ವಾರಿಜಮುಖಿ ಪಾಡುತ ತೂಗಿದಳು ಲಾಲಿ।।28।। ಶಂಖಚಕ್ರಧರಲಾಲಿ ಪಂಕಜ ಬ್ರಹ್ಮನೆ ಲಾಲಿ। ಪಂಕಜಾಕ್ಷನೆ ಲಾಲಿ ಎಂದು। ಪಂಕಜ ಮುಖಿ ಪಾಡುತ ತೂಗಿದಳು ಲಾಲಿ।।29।। ಗಂಗೆ ಪೊತ್ತವಲಾಲಿ। ಗಂಗೆ ಪಡೆದವ ಲಾಲಿ। ಅಂಬುಜಾಕ್ಷನೆ ಲಾಲಿ ಎಂದು। ಅಂಬುಜ ಮುಖಿ ಪಾಡುತ್ತ ತೂಗಿದಳು ಲಾಲಿ।।30।। ನಿತ್ಯನೇಮವ ಮಾಡಿ ಮತ್ತಾಮುನಿ ಬಂದ ರಾಮರಾಮ। ಮಕ್ಕಳು ಯಾರೆಂದು ವನಿತೆಯ ಕೇಲಿದ ರಾಮರಾಮ।।31।। ಹೋಮ ನೇಮವ ಮಾಡಿ ಅಮಹಾಮುನಿಬಂದ ರಾಮರಾಮ। ಬಾಲಕರು ಯಾರೆಂದು ಸುದತಿಯ ಕೇಳಿದ ರಾಮರಾಮ।।32।। ಇವರೀಗ ಹರಿಹರಬಹ್ಮ ಸ್ವರೂಪರು ರಾಮರಾಮ। ಕರುಣಿಸಿ ಬಂದರು ತಾವೇ ನಮ್ಮ ಬಳಿಗೆ ರಾಮರಾಮ।।33।। ಯಜ್ಞಾದಿನಿತ್ಯ

ಕರ್ಮಂಗಳಿನ್ಯಾತಕೆ ರಾಮರಾಮ। ಸ್ವರ್ಗಭೋಗದ ಗೊಡವೆ ಇನ್ಯಾತಕೆ ರಾಮರಾಮ।।34।। ಸ್ನಾನದಾನ ಉದಾನಗಳ್ಯಾತಕೆ ರಾಮರಾಮ। ಸ್ವರ್ಗದ ಭೋಗದ ಗೊಡವೆ ಇನ್ಯಾತಕ್ಕೆ ರಾಮರಾಮ।।35।। ಈ ಪರಿಯಿಂದಲಿ ಹಗಲಿರುಳೆನ್ನದೆ ರಾಮರಾಮ। ತಾಪತ್ರಯವಬಿಟ್ಟು ಸತಿಪತಿಗಳಿದ್ದರು ರಾಮರಾಮ।।36।। ಅಲ್ಲಿಗೆ ಸರಸ್ವತಿ ಪಾರ್ವತಿ ಲಕ್ಷ್ಮಿಯರು ರಾಮರಾಮ। ಮೆಲ್ಲನೆ ಬಂದರು ಋಷಿಗಳಾಶ್ರಮಕೇ ರಾಮರಾಮ।।37।। ಬಂದವರಿಗೆ ಅಭಿವಂದನೆಗಳ ಮಾಡಿ ರಾಮರಾಮ। ಗಂಧಅಕ್ಷತೆಗಿಟ್ಟು ತಾಂಬೂಲಕೊಟ್ಟು ರಾಮರಾಮ।।38।। ಕಬ್ಬಿನ ಮೇಲೆ ಜೇನಿಕ್ಕಿದಂತಾಯಿತು ರಾಮರಾಮ। ಒಬ್ಬರ ಕಾಣಕ್ಕೆ ಸ್ವರ್ಗವೇ ಕಂಡೆವು ರಾಮರಾಮ।।39।। ನಿಮ್ಮಿಂದ ಹರಿಹರ ಬ್ರಹ್ಮರಕಂಡೇವು ರಾಮರಾಮ। ನಿಮ್ಮಿಂದ ಕಂಡೆವು ತ್ರಿಮೂರ್ತಿಗಳನ್ನು ರಾಮರಾಮ।।40।। ಉತ್ತಮ ಪತಿವ್ರತೆ ಅನುಸೂಯ ದೇವಿಗೆ ರಾಮರಾಮ। ಪರಿವ್ರತೆ ನೀ ನಮ್ಮ ಪತಿಯ ಕೊಡೆಂದರು ರಾಮ ರಾಮ।।41।। ಉತ್ತಮವೆಂದಳೆ ಪರಮ ಪತಿವ್ರತೆ ರಾಮರಾಮ। ಮತ್ತಾ ಕಮಂಡಲದ ಉದಕಾವ ತಂದಾಳು ರಾಮರಾಮ।।42।। ಪತಿಯ ನೆನೆದಳು ಶ್ರೀಪತಿಯ ನೆನೆದಳು ರಾಮರಾಮ। ಮತ್ತಾ ಕಮಂಡಲದ ಉದಕಾವ ತಳೆಯಲು ರಾಮರಾಮ।।43।। ನಿಂದಾರು ತಾವ್ ತಮ್ಮ ಪತಿಯೊಡಗೂಡೀ ರಾಮರಾಮ। ನಿಂದಾರು ತಾವ್ ತಮ್ಮ ವಾಹನಂಗಳನೇರಿ ರಾಮರಾಮ।।44।। ಉತ್ತಮ ಪತಿವ್ರತೆ ಅನುಸೂಯ ದೇವಿಗೆ ರಾಮರಾಮ। ಪತಿವ್ರತೆ ನೀ ನಮ್ಮ ವರವ ಬೇಡೆಂದರು ರಾಮರಾಮ।।45।। ಉತ್ತಮ ವೆಂದಳೆ ಪರಮ ಪತಿವ್ರತೆ ರಾಮರಾಮ। ತ್ರಿಮೂರ್ತಿಗಳೆನ್ನ ಮಕ್ಕಳಾಗಿ ಜನಿಸಬೇಕೆಂದಳು ರಾಮರಾಮ।।46।। ಉತ್ತಮ ಪತಿವ್ರತೆ ಅನುಸೂಯದೇವಿಗೆ ರಾಮರಾಮ। ದತ್ತಾತ್ರೇಯ ಮುನಿ ಅವತರಿಸಿದರಾಗ ರಾಮರಾಮ।।47।। ಆತನ ನೆನೆದಾರು ಭೂತತಾಪಗಳಿಲ್ಲ ರಾಮರಾಮ। ಕಾಶಿಮಹಾಕ್ಷೇತ್ರ ಕೊಲ್ಲಾಪುರದಲ್ಲಿ ರಾಮರಾಮ।।48।। ಸಂತೋಷದಿಂ ಶ್ರೀಷನ ಸಲಹುತ ಲಿದ್ದರು ರಾಮರಾಮ। ವಾಸವಾಗಿದ್ದರು ಪುರಂದರ ವಿಠಲನ ನೆನೆಯುತ್ತ ರಾಮರಾಮ ।।

ಪರಮ ಪತಿವ್ರತೆ ಅನುಸೂಯೆ (ದತ್ತ ಚರಿತ್ರೆ)

ಪರಮ ಪತಿವ್ರತೆ ಅನುಸೂಯೆ ಗರ್ಭದಲಿ ಮುನಿದತ್ತಾತ್ರೇಯ ಜನಿಸಿದ ಕಥೆಯಿದು ರಾಮ ರಾಮ ವಡ್ಡೋಲಗದೊಳು ಲೋಕವಾರ್ತೆಯನಾಡುತ ಅತ್ರಿಮಹಾಮುನಿ ಭಾರ್ಯೆ ಅನುಸೂಯೆ ಪತಿವ್ರತೆ ಎನಲು ರಾಮ ರಾಮ ಚಿತ್ತಜಮುಖಿಯರು ಮುನಿದು ಕೋಪವತಾಳಿ ಆಕೆಯ ವ್ರತ ಕೆಡಿಸಿ ಬಂದಲ್ಲದೇ ಏಕಾಂತಸೇವೆಗೆ ಬಾರೆವೆಂದರೂ ರಾಮರಾಮ।। ತ್ರಿಮೂರ್ತಿಗಳು ಸಿಂಹಾಸನವಿಳಿದು ಬಂದತ್ರಿ ಮಹಾಮುನಿ ಸತಿಯೊಡನೆ ನುಡಿದರು ರಾಮರಾಮ।। ಹಸಿದು ಬಳಲಿ ಬಹು ಬಿಸಿಲಿನಿಂದ ಬಂದಿಹೆವು ಅತಿಥಿ ಸತ್ಕಾರಗಳಾಗ ಬೇಕೆಂದರು ರಾಮರಾಮ। ಉತ್ತುಮವೆನುತಲಿ ಪರಮ ಪತಿವ್ರತೆ ಕೊಟ್ಟಳೆ ಕರ ಚರಣಂಗಳಿ ಗುದಕವ ರಾಮರಾಮ। ಕಬ್ಬಿಣದ ಕಡಲೆಯ ಗುಗ್ಗರಿಯ ಮಾಡೆಂದು ರುದ್ರದೇವರೆಲ್ಲಬಂದು ಅನುಸೂಯೆಗ್ಹೇಳಿದರು ರಾಮರಾಮ। ಮರಳ ಮುಟ್ಟಿಕೆಗಳ ಕಡುಬನೆ ಮಾಡೆಂದು ನರಹರಿ ದೇವರು ಬಂದು ಅನುಸೂಯೆಗ್ಹೇಳಿದರು ರಾಮರಾಮ। ಗೋಧಿಕಲ್ಲಿನ ಪಾಯಸ ಮಾಡೆಂದು ನಾರಾಯಣ ದೇವರು ಬಂದು ಅನುಸೂಯೆಗ್ಹೇಳಿದರು ರಾಮರಾಮ। ಕಬ್ಬಿಣದ ಕಡಲೆಯ ಗುಗ್ಗರಿಯ ರುದ್ರನಿಗೆ, ಮರಳ ಮುಟ್ಟಿಕೆಗಳ ಕಡುಬಾ ನರಹರಿಗೆ। ಗೋಧಿಕಲ್ಲ ಪಾಯಸ ನಾರಾಯಣಗೆ ಎಡೆಮಾಡಿ ಬಡಿಸಿದಳು ರಾಮರಾಮ।। ಉಟ್ಟಿದ್ದ ಬಿಟ್ಟು ನೀ ಹುಟ್ಟಿದ ಮಾರ್ಗದಲಿ ಇಕ್ಕಿದಲ್ಲದೆ ತುತ್ತಿಡೆವೆಂದರು ರಾಮರಾಮ।ಧ್ಯಾನಿಸಿ ಪತಿಯ ನೆನೆದಳು ಶ್ರೀಪತಿಯೇ ಗತಿಯೆಂದು ಕಮಂಡಲದುದಕವ ತಳೆದಾಳು ರಾಮರಾಮ।। ಅಂಬೆಗಾಲಿಕ್ಕುತ ಹಸುಮಕ್ಕಳಾ ದವರ ಎತ್ತಿಕೊಂಡಳು ತನ್ ತೋಳ್ ತೊಡೆಯಮೇಲೆ ರಾಮರಾಮ।। ಆಸತಿ ಪತಿಯು ಬರುವ ಮಾರ್ಗವಾ ಕಾಣಲು ಬಾಲಕರ್ಯಾರೆಂದು ಮುನೀಶ್ವರ ಕೇಳಿದಾ ರಾಮರಾಮ ।। ಅತ್ರಿ ರೂಪಿನಲಿ ಇಲ್ಲೀಗೆ ಬಂದಾರು ಜನನಿ ಮಾರ್ಗದಿ ಹಾಲುಣಿಸಬೇಕೆಂದರು ರಾಮರಾಮ। ಹೃದಯದಿ ನಿಮ್ಮ ಮಹಿಮೆಯ ನೆನೆಯೆ ಬಾಲಕರಿವರಾದರು ರಾಮರಾಮ। ಹಾಡಿಪಾಡಿ ಬಣ್ಣದಾ ತೊಟ್ಟಿಲಲಿ ತೂಗುತೀ ಪರಿಯಲಿ ಶಿಶುಗಳ ಸಂತೈಸುತಲಿದ್ದೆ ರಾಮರಾಮ। ಅಲ್ಲಿಗೆ ಬಂದ ನಾರದರು ಋಷೀಶ್ವರರೂ, ಇಷ್ಟು ಚಿಂತೆಗಳೇಕೆಂದರು ರಾಮರಾಮ। ಪತಿವ್ರತೆಯರೇ ನಿಮ್ಮ ಪತಿಗಳು ಬೇಕಾದರೆ ಪ್ರಾರ್ಥನೆಯ ಮಾಡಿರೆಂದರು

ನಾರದರು ರಾಮರಾಮ। ಸರಸ್ವತಿ, ಲಕ್ಷ್ಮೀ ಪಾರ್ವತಿ ಮೂವರು ಸಿಂಹಾಸನವಿಳಿದು ಆತ್ರಿಆಲಯಕೆ ಬಂದರು ರಾಮರಾಮ। ಪತಿವ್ರತೆ ನಮ್ಮ ಪತಿಯ ತೋರೆನಲು ಕಮಂಡಲದುದಕಾವ ತಳೆದಳು ಅನುಸೂಯೆ ರಾಮರಾಮ। ಸತಿಪತಿಯರು ಒಂದಾಗಿ ತಮ್ಮ ವಾಹನಂಗಳನೇರಿ ತ್ರಿಮೂರ್ತಿ ರೂಪದಲಿ ಜನಿಸುವೆಂದ್ದೇಳಿ ಹೊರಟರು ರಾಮರಾಮ। ದತ್ತಾತ್ರೇಯ ನೆನೆದರೆ ದಾರಿದ್ರ್ಯ ಪರಿಹಾರ ಕರುಣೆಯ ತೋರ್ವನು ತ್ರಿಮೂರ್ತಿ ರೂಪನು ರಾಮರಾಮ।।

ಆದಿದೇವ ಆದಿ ಮೂಲ ಆದಿ ಬ್ರಹ್ಮ ಜೋ ಜೋ (ಲಾಲಿ)

ಆದಿದೇವ ಆದಿ ಮೂಲ ಆದಿ ಬ್ರಹ್ಮ ಜೋ ಜೋ। ಪರಮಪರುಷ ಪರಬ್ರಹ್ಮ ಪರಮೇಶ್ವರ ಜೋ ಜೋ।।ಪ।। ಬಾಳ ಬೆಳಕ ಬೆಳಗಲೆಂದು ಸೃಷ್ಟಿಸೊಬಗ ನೋಡಲೆಂದು। ತಾಯಿಮಡಿಲ ತುಂಬಿ ಬಂದ। ದೇವದೇವನೆ ಜೋಜೋ।।1।। ಭುವಿಯ ಸ್ವಚ್ಛಮಾಡಲೆಂದು। ಇಳೆಗೆ ಇಳಿದು ಬಂದು ನನ್ನ। ಧನ್ಯಳಾಗಿ ಮಾಡಿದ। ಲೋಕಪಾಲನೆ ಜೋಜೋ।।2।। ವನಮಾಲೀಕೇಶವನೇ ಘನ ಶೂಲೀ ಸದಾಶಿವನೇ। ಕಮಲಾಸನ ವಾಣೀಶನೇ। ತ್ರೀಮೂರ್ತಿಗಳೇ ಜೋ ಜೋ।।3।।

ಮಂಗಳಾರತಿ ಎತ್ತಿ ಬೆಳಗಿರೆ (ಆರತಿ) ರಾಗ: ಸುರುಟಿ–ಮಿಶ್ರಛಾಪುತಾಳ

ಮಂಗಳಾರತಿ ಎತ್ತಿ ಬೆಳಗಿರೆ ಶ್ರೀದತ್ತ ಗುರುದೇವಗೆ ।।ಪ।। ಸಂಗಡಿದ್ದು ಸಲಹುವಂಥ। ತ್ರಿಮೂರ್ತಿ ಅವತಾರಿಗೆ।। ಬ್ರಹ್ಮ ವಿಷ್ಣು ರುದ್ರ ರೂಪದಿ। ಧರೆಗೆ ಬಂದ ದೇವಗೆ। ಗಾಣಗಾಪುರದಿ ನೆಲೆಸಿಹ। ಔದುಂಬರವಾಸಿಗೆ।।1।। ಭಕ್ತಜನರ ಭಕ್ತಿಗೊಲಿವ। ಶ್ರೀಪಾದವಲ್ಲಭಗೇ। ವರವ ನೀಡಿ ಧರೆಗೆ ಬಂದ। ಅನುಸೂಯಾತ್ಮಜ ಮೂರ್ತಿಗೆ।।2।। ತೋರಿ ಮಹಿಮೆಯ ನೋವ। ನೀಗುವ ಅವಧೂತಾವತಾರಿಗೆ। ಕೋರಿ ಭಜಿಸುವ ದೇವ ಶ್ರೀ ನರ। ಸಿಂಹ ಸರಸ್ವತಿ ದೇವಗೆ।।3।।

ಅತ್ರಿತನಯ ಗುರುದತ್ತನಿಗೆ (ಮಂಗಳ) ರಾಗ: ಆರಭಿ

ಅತ್ರಿತನಯ ಗುರುದತ್ತನಿಗೆ ಚಿತ್ತಚರಿತ ಗುರುಮೂರುತಿಗೆ। ಧಾತ್ರಿಯ ತಿರುಗುತ ಭಕ್ತರ ಸಲಹುವ ಸ್ತೋತ್ರ ಪ್ರಿಯ ದತ್ತಾತ್ರೇಯಗೆ। ಮಂಗಳಂ ಜಯ ಮಂಗಳಂ ।।ಪ।। ಮೂರು ಗುಣಾತ್ಮಕ ಮೂರುತಿಗೆ। ನೂರು ಜಗದಿ ಸಂಚಾರಿಪಗೆ। ಧಾರುಣಿಯೊಳು ದುರಿತಗಳಾ ಹರಿಸುವ ವಾರಿಜನೇತ್ರ ಪ್ರಕಾಶನಿಗೆ।।ಮಂ।। ಕಲಿಯುಗದಲಿ ಕಲಿ ಹರಣನಿಗೆ। ಜಲಜಭವಾರ್ಚಿತ ಚರಣನಿಗೆ। ಖಳ ಸಂಹರನಿಗೆ ತ್ರೈಮೂರುತಿಗೆ। ತಿಳಿಯಲು ತ್ರಿಗುಣಾತೀತನಿಗೆ।।ಮಂ।। ವಾಡಿ ಕ್ಷೇತ್ರ ನಿವಾಸನಿಗೆ। ರೂಢಿಯ ರಜಕಗೆ ಕೊಟ್ಟವಗೆ। ಆಡಿಸಿ ವೇದವ ಪತಿತನ ಮುಖದಿಂ। ಗೂಢವ ಜನರಿಗೆ ತೋರಿದಗೆ।।ಮಂ।। ಕುಷ್ಠವ ಹರಿಸಿದ ಮಹಿಮನಿಗೆ। ಇಷ್ಟಾರ್ಥವ ನೀಯುವ ಗುರುವರಗೆ। ಅಷ್ಟಸ್ಥಾನ ದೊಳಷ್ಟರೂಪಗೆ। ಇಷ್ಟಾರ್ಥವ ತಾನಿತ್ತವಗೆ।।ಮಂ।। ಬರಡೆಮ್ಮೆಯ ಹಿಂಡಿಸಿದವಗೆ। ಕೊರಡು ಸತ್ತಿರಲದ ಚಿಗುರಿಸಿದಗೆ। ಶರಣುತಂತುಕನಿಗೆ। ಶ್ರೀಶೈಲವಬಹು ತ್ವರಿತದಿಂ ತೋರಿಸಿ ಮೆರೆದವಗೆ ।।ಮಂ।। ಬಂಜೆಗೆ ಪುತ್ರರನಿತ್ತವಗೆ। ಕಂಜನಾಭ ಸೇವಿತಪದಗೆ। ಭಂಜಿಸಿ ದೈತ್ಯರ ಶಿಷ್ಯರ ಸಲಹುವ। ಮಂಜುಳರೂಪಗೆ ದತ್ತನಿಗೆ।।ಮಂ।। ಯತಿನರಸಿಂಹ ಸರಸ್ವತಿಗೆ। ನುತಜನ ಸೇವಿತ ಚರಣನಿಗೆ। ಯತಿವರ ಶ್ರೀಪಾದಶ್ರೀವಲ್ಲಭ ಗತಿ ಮುದದಿಂ ಮಂಗಳವೆನುವೆ।।ಮಂ।। ಔದುಂಬರ ಛಾಯ ಪ್ರಿಯಗೆ। ವೇದಕೆ ತಾಗದ ಲೀಲನಿಗೆ। ಮೇದಿನಿಯೊಳು ಗಂಧರ್ವನಗರದಲಿ। ಮೋದದಿ ಲೀಲೆಯ ತೋರಿದಗೆ।।ಮಂ।। ಕೃಷ್ಣನದಿ ತಟ ವಾಸನಿಗೆ। ವಿಷ್ಣುಶರ್ಮನಿಂ ಸೇವಿಪಗೆ। ವಿಷ್ಣು ಶಿಷ್ಯನ ರಾಘವೇಂದ್ರರಿಗೆ। ಮನ್ನಿಸಿ ಸರ್ವವ ಕೊಡುವವಗೆ।।ಮಂ।। ಅದ್ವೈತಾಮೃತ ಸಾರನಿಗೆ। ವೇದಧರ್ಮ ಪರಿಪೋಷಕಗೆ। ಮುದದಿಂ ಭಕ್ತರ ಪಾಲಿಪಗೆ। ಶ್ರೀಧರ ಗುರುವರ ಮೂರುತಿಗೆ।।ಮಂ।। ಶ್ರೀಗುರು ಮಹಿಮೆಯ ತೋರಿದಗೆ। ಜಗದೋದ್ಧಾರ ದೀಕ್ಷಾಪತಿಗೆ। ಅಗಡಿಯವಾಸಗೆ ನರಹರಿ ರೂಪಗೆ। ನಾರಾಯಣ ಭಗವಾನ್ ಗುರುವರಗೆ। ಮಂಗಳಂ ಜಯ ಮಂಗಳಂ।।

❖ ❖ ❖